ಸರ್ಕಾರಿ ಉರ್ದು ಪ್ರೌಢಶಾಲೆ(RMSA) ಅರಳಿಹಳ್ಳಿ, ಭದ್ರಾವತಿ ತಾಲ್ಲೂಕು
ಶಿವಮೊಗ್ಗ ಜಿಲ್ಲೆ

# ಪಾಸಿಂಗ್ ಪ್ಯಾಕೇಜ್

## ದ್ವಿತೀಯ ಭಾಷೆ ಕನ್ನಡ

# ಹೊಂಗಿರಣ

## 10ನೆಯ ತರಗತಿ

(ಇದು ಹೊಸ ಪಠ್ಯ ಪುಸ್ತಕದ ಅನುಸಾರವಾಗಿದೆ.)

ಪರಶುರಾಮ್ ಎನ್, ಎಂ.ಎ., ಎಂ.ಎಡ್., ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಉರ್ದು ಪ್ರೌಢಶಾಲೆ(RMSA) ಅರಳಿಹಳ್ಳಿ, ಭದ್ರಾವತಿ ತಾಲ್ಲೂಕು
9731436839

# ಪರಿವಿಡಿ


| ಕ್ರ ಸಂ | ವಿವರ | ಪುಟ ಸಂಖ್ಯೆ |
|---|---|---|
| | **ಗದ್ಯಭಾಗ** | |
| 1 | ಒಣ ಮರದ ಗಿಳಿ | 3– 4 |
| 2 | ಅಸಿ–ಮಸಿ–ಕೃಷಿ | 4– 5 |
| 3 | ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ | 5– 6 |
| 4 | ಹಕ್ಕಿಗೂಡುಗಳ ನಿಗೂಢ ಜಗತ್ತು | 6– 7 |
| 5 | ಕಾಫೀ–ಕಪ್ಪು | 7– 8 |
| 6 | ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ | 9–10 |
| 7 | ನನ್ನ ಗೋಪಾಲ | 10–11 |
| | **ಪದ್ಯಭಾಗ** | |
| 1 | ಏಣಿ | 11–12 |
| 2 | ಬೋಧಿವೃಕ್ಷದ ಹಾಡು | 12–13 |
| 3 | ಸವಿಚೈತ್ರ | 13–14 |
| 4 | ಸದ್ದು ಮಾಡದಿರು | 14–15 |
| 5 | ಗುರಿ | 15–16 |
| 6 | ಮೂಡಲ್ ಕುಣಿಗಲ್ ಕೆರೆ | 16–17 |
| 7 | ವಚನಗಳು | 17–19 |
| 8 | ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ | 19–20 |
| | **ಪೂರಕ ಓದು** | |
| 1 | ಕಳ್ಳರ ಗುರು | 20 |
| 2 | ಹೊಂಗೆ ಬೇವುಗಳ ಹಾಡು | 21 |
| | | |
| 1 | ಕಂಠಪಾಠದ ಪದ್ಯಗಳು | 21 |
| 2 | ಪದ್ಯಗಳ ಸಾರಾಂಶಗಳು | 22–23 |
| 3 | ಅಲಂಕಾರಗಳು | 23–25 |
| 4 | ಗಾದೆಗಳ ವಿಸ್ತರಣೆ | 25–26 |
| 5 | ಪ್ರಬಂಧ ರಚನೆ | 26–27 |
| 6 | ಪತ್ರಲೇಖನ | 28–29 |
| 7 | ಅಪರಿಚಿತ ಗದ್ಯ ( ಪ್ಯಾಸೇಜ್ ) | 30 |
| 8 | ಪರಾಮರ್ಶನ ಗ್ರಂಥಗಳು | 30 |

**ಕವಿ/ಲೇಖಕರ ಪರಿಚಯ**

- ಅ.ರಾ. ಮಿತ್ರ ಇವರು 1935 ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಎಂಬಲ್ಲಿ ಜನಿಸಿದರು.
- ಇವರು ಮಹಾಭಾರತ ಪಾತ್ರ ಸಂಗತಿಗಳು, ಛಂದೋಮಿತ್ರ, ಒಳನೋಟಗಳು ಮತ್ತು ಕವಿಗಳ ಬೆನ್ನೇರಿ ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ ಮತ್ತು ಕಾವ್ಯಾನಂದ ಪುರಸ್ಕಾರ ಮುಂತಾದ ಪ್ರಶಸ್ತಿಗಳು ಲಭಿಸಿವೆ.
- ಪ್ರಕೃತ ಪಾಠವನ್ನು ಇವರ 'ಮಹಾಭಾರತ(ವ್ಯಾಸ) ಪಾತ್ರ ಸಂಗತಿಗಳು' ಪುಸ್ತಕದಿಂದ ಆರಿಸಲಾಗಿದೆ.

**I. ಪ್ರಶ್ನೆಗಳು**

**ಅ) <u>ಒಂದು ವಾಕ್ಯಗಳಲ್ಲಿ ಉತ್ತರಿಸಿರಿ</u>**

1.ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?
ವಿಷ ಸವರಿದ ಬಾಣಗಳನ್ನು ಸಿದ್ಧ ಮಾಡಿಕೊಳ್ಳುವುದು ಉಪಾಯವಾಗಿತ್ತು.
2. ವಿಷದ ಬಾಣವು ಮರಕ್ಕೆ ಏಕೆ ತಗುಲಿತು?
ಜಿಂಕೆಯು ಹಾರಿ ಬೇಡನ ಬಾಣದ ಹೊಡೆತದಿಂದ ತಪ್ಪಿಸಿಕೊಂಡಿತು. ಆದ ಕಾರಣ ವಿಷದ ಬಾಣವು ಮರಕ್ಕೆ ತಗುಲಿತು.
3. ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು?
ಮರಕ್ಕೆ ತಗುಲಿದ್ದರಿಂದ ಮರವು ಒಣಗಿ ನಿಂತಿತು.
4. ಇಂದ್ರನಿಗೆ ಗಿಳಿಯನ್ನು ಕಂಡು ಆಶ್ಚರ್ಯವಾದದ್ದು ಏಕೆ?
ಮರ ಒಣಗಿ ನಿಂತರೂ, ಗಿಳಿ ಆ ಮರದ ಪೊಟರೆಯನ್ನು ಬಿಟ್ಟು ಹೋಗದೆ ಅಲ್ಲಿಯೇ ವಾಸ ಮಾಡುತ್ತಿರುವುದನ್ನು ಕಂಡು.
5. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?
ತತ್ವನಿಷ್ಠೆಯ ಗುಣವನ್ನು ಇಂದ್ರನು ಮೆಚ್ಚಿಕೊಂಡನು.
6. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?
ಗಿಳಿಗೆ ಬೇಕಾದ ವರವನ್ನು ಕೊಡುವುದರ ಮೂಲಕ ಸಂತೋಷವನ್ನು ಪ್ರಕಟಿಸಿದನು.
7. ಬಾಣಕ್ಕೆ ಗುರಿಯಾಗುವಷ್ಟು ದೂರ ಎಂದರೇನು?
ಬಿಟ್ಟ ಬಾಣ ತಾಗುವಷ್ಟು ದೂರ. ಅಂದರೆ ಬಾಣವನ್ನು ಬಿಡಲು ಅನುಕೂಲವಾಗುವಷ್ಟು ದೂರ ಎಂದರ್ಥ.
8. ಬೇಡನು ಯಾವ ಊರಿನಲ್ಲಿ ವಾಸವಾಗಿದ್ದನು?
ಬೇಡನು ಕಾಶಿಯಲ್ಲಿ ವಾಸವಾಗಿದ್ದನು.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?
"ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ, ತನ್ನ ಹಸಿರು ಬಣ್ಣದಿಂದ ನನ್ನ ಮನಸ್ಸಿಗೆ ಮುದ ನೀಡಿದೆ, ನೆರಳು ನೀಡಿದೆ, ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಹಾಗೆಂದು ಈ ಸ್ಥಿತಿಯಲ್ಲಿ ನಾನು ಅದನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಮರಕ್ಕೆ ಕೃತಘ್ನನಾಗಲು ತನಗೆ ಇಷ್ಟವಿಲ್ಲವೆಂದು ಹೇಳಿತು.
2. ಸಾಮಾನ್ಯವಾದ ಲೋಕ ವರ್ತನೆ ಯಾವುದು?
ಆಶ್ರಯ ಕೊಟ್ಟವರಿಗೆ ದುರದೃಷ್ಟ ಒದಗಿದಾಗ ಅವರನ್ನು ಕೈಬಿಟ್ಟು ಹೋಗಿ ಕೃತಘ್ನರೆನಿಸಿಕೊಳ್ಳುತ್ತಾರೆ. ಸುಖ ಸಂಪತ್ತು ಇರುವಾಗ ಜೊತೆಯಲ್ಲಿದ್ದು ದುರ್ಬರಗಳಿಗೆಯಲ್ಲಿ ಅವರಿಂದ ದೂರವಾಗುವುದು, ಉಪಕಾರ ಸ್ಮರಣೆ ಇಲ್ಲದಿರುವುದು ಸಾಮಾನ್ಯ ಲೋಕವರ್ತನೆಯಾಗಿದೆ.
3. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?
'ದೇವರಾಜ, ವರವನ್ನು ಕೊಡುವ ಇಚ್ಛೆ ಇದ್ದರೆ ತಾನು ವಾಸವಾಗಿರುವ ಈ ಮರವು ಮೊದಲಿನಂತೆ ಹಸಿರಿನಿಂದ ನಳನಳಿಸುವಂತಾಗಬೇಕು. ಫಲಪುಷ್ಪ ಭಾರದಿಂದ ಬೀಗುವ, ನೆರಳು ಕೊಡುವ ಮರವನ್ನು ದಯಾಪಾಲಿಸಬೇಕೆಂದು' ವರವನ್ನು ಕೇಳಿತು.

**ಇ) ಸಂದರ್ಭದೊಡನೆ ವಿವರಿಸಿ**

1. ಇಂಥಾ ಒಣಮರದಲ್ಲಿ ಏಕೆ ವಾಸಮಾಡುತ್ತಿದ್ದೆಯೇ?
ಈ ವಾಕ್ಯವನ್ನು ಅ.ರಾ.ಮಿತ್ರ ಬರೆದಿರುವ "ಮಹಾಭಾರತ ಪಾತ್ರ ಸಂಗತಿಗಳು" ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಈ ವಾಕ್ಯವನ್ನು ಇಂದ್ರನು ಗಿಳಿಗೆ ಕೇಳಿದನು. ಒಣಮರದಲ್ಲಿ ವಾಸವಾಗಿದ್ದ ಗಿಳಿಯನ್ನು ಅದರ ತತ್ವನಿಷ್ಠೆಯನ್ನು ಕಂಡು ಇಂದ್ರನು ಹೀಗೆ ಅದನ್ನು ಪ್ರಶ್ನಿಸಿದನು. ಏನಾದರೂ ವರವನ್ನು ಕೊಡಬೇಕು ಎಂದು ಯೋಚಿಸಿ ಹೀಗೆಂದು ಇಂದ್ರನು ಕೇಳಿದನು.

2. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ".

ಈ ವಾಕ್ಯವನ್ನು ಅ.ರಾ.ಮಿತ್ರ ಬರೆದಿರುವ "ಮಹಾಭಾರತ ಪಾತ್ರ ಸಂಗತಿಗಳು" ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಈ ವಾಕ್ಯವನ್ನು ಗಿಳಿಯು ಇಂದ್ರನಿಗೆ ಹೇಳಿತು. ಇಂದ್ರನು ಗಿಳಿಯ ತತ್ವನಿಷ್ಠೆಯನ್ನು ಮೆಚ್ಚಿ ಏನಾದರೂ ವರವನ್ನು ಕೇಳು ಎಂದಾಗ ಗಿಳಿಯು ಮರದ ಪರಿಸ್ಥಿತಿಗೆ ಮರುಗಿ ಅದನ್ನು ಮೊದಲಿನಂತೆ ಮಾಡು ಎಂದು ಕಾರಣ ಕೇಳಿದ ಇಂದ್ರನಿಗೆ ಹೀಗೆ ಉತ್ತರಿಸಿತು.

## ಗದ್ಯ-2. ಅಸಿ-ಮಸಿ-ಕೃಷಿ – ಡಾ॥ ಶ್ರೀ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

**ಕವಿ/ಲೇಖಕರ ಪರಿಚಯ**

- ಡಾ॥ ಶ್ರೀ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು 1951 ರಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಹೆಡಿಯಾಲ ಎಂಬಲ್ಲಿ ಜನಿಸಿದರು.
- ಇವರು ವ್ಯಕ್ತಿತ್ವ, ಜೀವನ ದರ್ಶನ, ಕೈದೀವಿಗೆ ಮತ್ತು ಕಾಯಕ ದಾಸೋಹ ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ರಾಜ್ಯೋತ್ಸವ ಪ್ರಶಸ್ತಿ, ಗೌರವ ಫೆಲೋಷಿಪ್ ಮತ್ತು ಪಾಲ್‌ಹ್ಯಾರಿಸ್ ಮುಂತಾದ ಪ್ರಶಸ್ತಿಗಳು ಲಭಿಸಿವೆ.
- ಪ್ರಸ್ತುತ 'ಅಸಿ-ಮಸಿ-ಕೃಷಿ' ಲೇಖನವನ್ನು ಅವರ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆರಿಸಲಾಗಿದೆ.

**I. ಪ್ರಶ್ನೆಗಳು**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1.ದೇಶದುದ್ದಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?

ಸೈನಿಕ, ಸಾಹಿತಿ ಮತ್ತು ರೈತರನ್ನು ಅವಲಂಬಿಸಿದೆ.

2. ಅಸಿ-ಮಸಿ- ಎಂದರೇನು?

ಅಸಿ ಎಂದರೆ ಯುದ್ಧ (ಸೈನಿಕ) ಮಸಿ ಎಂದರೆ ಸಾಹಿತ್ಯ ರಚನೆ.

3. ಈ ನಾಡಿನ ಬೆನ್ನೆಲುಬು ಯಾರು?

ಕೃಷಿಕ ಈ ನಾಡಿನ ಬೆನ್ನೆಲುಬು.

4.ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?

'ರಂಗ ಜಂಗಮ' ಎಂದು ಖ್ಯಾತರಾಗಿದ್ದಾರೆ.

5. .ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ ಯಾವ ಪ್ರಶಸ್ತಿ ನೀಡಿದೆ?

'ಪಾಲ್ ಹ್ಯಾರಿಸ್' ಪ್ರಶಸ್ತಿಯನ್ನು ನೀಡಿದೆ.

6. ಸರ್ವಜ್ಞನು ತಿಳಿಸುವಂತೆ ಕೋಟಿ ವಿದ್ಯೆಗಳಲ್ಲಿ ಯಾವ ವಿದ್ಯೆ ಮೇಲು?

ಸರ್ವಜ್ಞನು ತಿಳಿಸುವಂತೆ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ದೇಶದ ಅಭಿವೃದ್ಧಿ ಕುರಿತು ಜನರಾಡುವ ಮಾತುಗಳಾವುವು?

ವೈಜ್ಞಾನಿಕ ಬೆಳವಣಿಗೆಯೇ ನಿಜವಾದ ಪ್ರಗತಿ. ದೊಡ್ಡ ದೊಡ್ಡ ಅಣೆಕಟ್ಟುಗಳ ನಿರ್ಮಾಣವೇ ಜನರ ಉದ್ಧಾರದ ದಾರಿ, ವಿದ್ಯುತ್ ಉತ್ಪಾದನೆಯೇ ಇವೆಲ್ಲಕ್ಕೂ ಮೂಲ ಪ್ರೇರಣೆ ಎಂದೆಲ್ಲ ಹೇಳಬಹುದು. ನಮ್ಮ ಹಿರಿಯರು ದೇಶದ ಪ್ರಗತಿ, ಜನರ ಉದ್ಧಾರ ಅಸಿ,ಮಸಿ, ಕೃಷಿಯನ್ನು ಅವಲಂಬಿಸಿದೆ ಎನ್ನುತ್ತಿದ್ದರು.

2. ನಮ್ಮ ದೇಶದ ರಕ್ಷಣಾ ಪಡೆ ಏಕೆ ಪ್ರಬಲವಾಗಿರಬೇಕು?

ಅಸಿ ಎಂದರೆ ಯುದ್ಧ, ಯುದ್ಧ ಎಂದರೆ ಸೈನಿಕರು. ಸೈನಿಕರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ, ಇಲ್ಲದಿದ್ದರೆ ಬಲಿಷ್ಟ ದೇಶ ಎಲ್ಲರನ್ನು ಹೊಡೆದು ಹಾಕಿ ತಾನೇ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದುದರಿಂದ ನಮ್ಮ ರಕ್ಷಣಾ ಪಡೆ ತುಂಬಾ ಪ್ರಬಲರಾಗಿರಬೇಕು.

3. ಪೆನ್ನು ಖಡ್ಗಕ್ಕಿಂತ ಹರಿತವಾದದ್ದು ಏಕೆ? 'ಅಥವಾ' ಅಸಿಗಿಂತ ಮಸಿ ಶ್ರೇಷ್ಠವಾದುದು ಏಕೆ?

ಏಕೆಂದರೆ ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಅಂದರೆ ಬರವಣಿಗೆ ಅಷ್ಟೊಂದು ಪರಿಣಾಮಕಾರಿಯಾದುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕತೆ, ಕವನ ಹಲವರ ಬದುಕನ್ನು ಬದಲಾಯಿಸಬಲ್ಲದು. ಒಂದು ಸರ್ಕಾರವನ್ನು ಉರುಳಿಸಿ ಮತ್ತೊಂದು ಸರ್ಕಾರ ತರಬಹುದು. ಈ ನಿಟ್ಟಿನಲ್ಲಿ ಬರವಣಿಗೆ ಹೆಚ್ಚು ಶಕ್ತಿಶಾಲಿಯಾದದು.

4. ರೈತರು ಎದುರಿಸುತ್ತಿರುವ ಸಮಸ್ಯೆಗಳಾವವು?
ರೈತರು ಒಂದಡೆ ನಿಸರ್ಗದ ಜೊತೆ ಸೆಣಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾಯವೇ ಬೇಡ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮತ್ತೊಂದೆಡೆ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ವ್ಯವಸ್ಥೆಯ ವಿರುದ್ಧವೂ ಹೋರಾಟ ನಡೆಸಬೇಕಾಗಿದೆ.

**ಇ) ಸಂದರ್ಭದೊಡನೆ ವಿವರಿಸಿ**

1. ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ.
ಈ ವಾಕ್ಯವನ್ನು 'ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ 'ಅಸಿ–ಮಸಿ–ಕೃಷಿ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.
ರೈತರಲ್ಲಿ ಕಾಣುವ ದುರಾವಸ್ಥೆಯನ್ನು ವಿವರಿಸುವಾಗ ಅವರು ನಿರ್ಲಕ್ಷಕ್ಕೊಳಗಾಗಿದ್ದರು. ಅವರ ಕೆಲಸವನ್ನು ಶ್ರದ್ದೆಯಿಂದ ಮಾಡುತ್ತಾರೆಂದು ಎಂದು ವಿವರಿಸುವಾಗ ಲೇಖಕರು ಹೇಳಿದ್ದಾರೆ. ರಾಜಕಾರಣಿಗಳು, ಅಧಿಕಾರಿಗಳು, ಬಂಡವಾಳ ಶಾಹಿಗಳು, ವ್ಯಾಪಾರಸ್ಥರು, ಸಾಹಿತಿಗಳು, ಸಂಶೋಧಕರು, ವಿಜ್ಞಾನಿಗಳು, ತಂತ್ರಜ್ಞಾನಿಗಳು ಪ್ರತಿಯೊಬ್ಬರ ಬದಕು ಕೃಷಿಕರನ್ನೇ ಅವಲಂಬಿಸಿದ್ದರೂ ಅವರೆಲ್ಲರೂ ಕೃಷಿಯನ್ನು ಕೃಷಿ ಮಾಡುವ ರೈತನನ್ನು ನಿರ್ಲಕ್ಷಿಸಿದ್ದಾರೆ ಎಂದು ತಮ್ಮ ಮನದಾಳದ ಮಾತುಗಳಿಂದ ಲೇಖಕರು ಹೇಳಿದ್ದಾರೆ.
2. ಸಾಹಿತಿಗಳು ನಾಡಿನಲ್ಲಿ ಹೆಚ್ಚಿದ್ದಷ್ಟು ಸಮಾಜವು ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ?
ಈ ವಾಕ್ಯವನ್ನು 'ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ 'ಅಸಿ–ಮಸಿ–ಕೃಷಿ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.
ಈ ವಾಕ್ಯವನ್ನು ಲೇಖಕರು ಅಸಿಗಿಂತ (ರಕ್ಷಣೆ) ಮಸಿ (ಸಾಹಿತ್ಯ) ಮುಖ್ಯವಾದದ್ದು ಎಂದು ಹೇಳುವ ಸಂದರ್ಭದಲ್ಲಿ ಹೇಳಿದ್ದಾರೆ. 'ಪೆನ್ನು ಖಡ್ಗಕ್ಕಿಂತ ಹರಿತ' ಎಂದು ಉಲ್ಲೇಖಿಸಿದ್ದಾರೆ. ಪತ್ರಿಕೆಯಲ್ಲಿ ಬರುವ ಒಂದು ಲೇಖನಕ್ಕೆ ಸರ್ಕಾರವನ್ನು ಉರಳಿಸುವಷ್ಟು ಪ್ರಭಾವವಿರುತ್ತದೆ, ನಾಳೆ ಮತ್ತೊಂದು ಸರ್ಕಾರವನ್ನು ತರಬಹುದು. ಸಾಹಿತ್ಯದ ಸತ್ವದಿಂದ ಇಂತಹ ಸಾಹಿತಿಗಳು ನಾಡಿನಲ್ಲಿ ಹೆಚ್ಚು ಹೆಚ್ಚು ಇದ್ದರೆ ಸಮಾಜ ಪ್ರಗತಿಯ ಮೆಟ್ಟಲು ತುಳಿವುದು ಸಾಧ್ಯ.

| ಗದ್ಯ–03. | ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ | –ರಮೇಶಗೌಡ ಎಂ.ಕೆ. |
|---|---|---|

**ಕವಿ/ಲೇಖಕರ ಪರಿಚಯ**

- ರಮೇಶಗೌಡ. ಎಂ.ಕೆ. ಅವರು 1975 ರಲ್ಲಿ ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಕಿತ್ತೂರು ಗ್ರಾಮದಲ್ಲಿ ಜನಿಸಿದರು.
- ಇವರು 'ಅಮೃತಕ್ಕೆ ಹಾರಿದ ಗರುಡ', ರೂಪ ಬಯಲು, ಗಾನಯೋಗಿ ಡಾ॥ ಪಂ. ಪುಟ್ಟರಾಜ ಕವಿ ಗವಾಯಿಗಳು ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ರತ್ನಾಕರವರ್ಣಿ ಮುದ್ದಣ್ಣ ದತ್ತಿ ಪ್ರಶಸ್ತಿ ಮತ್ತು ವರ್ಷದ ಉತ್ತಮ ಕೃತಿ ಪ್ರಶಸ್ತಿಗಳು ಲಭಿಸಿವೆ.

**I.ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ಪುಟ್ಟರಾಜರ ತಂದೆ ತಾಯಿಗಳ ಹೆಸರೇನು?
ತಂದೆ ರೇವಣ್ಣಯ್ಯ, ತಾಯಿ ಸಿದ್ಧಮ್ಮ
2. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?
ಶಿಷ್ಯರ ಮನಸ್ಸನ್ನು ಓದುವ ಶಕ್ತಿ ಇರುತ್ತದೆ.
3. ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು?
ಪಾದಕ್ಕೆರಗಿ ಸೆರಗೊಡ್ಡಿ ಮಗನನ್ನು ಮನೆಗೆ ಕಳುಹಿಸಿ ಕೊಡುವಂತೆ ಬೇಡಿಕೊಂಡಳು.
4. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು?
ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು.
5. ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ?
ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸುವುದಕ್ಕಾಗಿ.
6. ಪುಟ್ಟರಾಜರು ಯಾವ ಲಿಪಿ ಕಲಿತು ಅದರಲ್ಲಿ ಪಾರಂಗತರಾದರು?
ಬ್ರೈಲ್ ಲಿಪಿ ಕಲಿತು ಅದರಲ್ಲಿ ಪಾರಂಗತರಾದರು.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದದು ಹೇಗೆ?

ಸಂಗೀತ ಲೋಕದ ಜಗದ್ಗುರು ಪಂಡಿತ ಪಂಚಾಕ್ಷರ ಗವಾಯಿಗಳ 'ಸಂಚಾರಿ ಸಂಗೀತ ಪಾಠಶಾಲೆ' ಒಮ್ಮೆ ಗವಿಮಠದಲ್ಲಿ ಕ್ಯಾಂಪ್ (ವಾಸ) ಮಾಡಿತ್ತು. ಅಲ್ಲಿಗೆ ಮಾವನವರೊಂದಿಗೆ ಪುಟ್ಟಯ್ಯನು ಬಂದು ಗುರುಗಳಾದ ಪಂಚಾಕ್ಷರ ಗವಾಯಿಗಳ ಶಿಷ್ಯತ್ವ ಸ್ವೀಕರಿಸಿ, ಪ್ರೀತಿಯ ಶಿಷ್ಯರೆಲ್ಲರಲ್ಲಿ ಈತನೂ ಒಬ್ಬನಾದನು.

2. ಪುಟ್ಟರಾಜ ಗವಾಯಿಗಳು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು?

ಪುಟ್ಟರಾಜ ಗವಾಯಿಗಳು ಪಾಣಿನಿಯ 'ಅಷ್ಟಾಧ್ಯಾಯಿ', ಶರ್ಮವರ್ಮನ 'ಕಾತಂತ್ರ', ಕೇಶಿರಾಜನ 'ಶಬ್ದಮಣಿದರ್ಪಣ', ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ಧಾನುಶಾಸ್ತ್ರ, ಛಂದಶ್ಯಾಸ್ತ್ರ ಹಾಗೂ ಕನ್ನಡ ವ್ಯಾಕರಣಗಳಲ್ಲಿ ನಿಷ್ಣಾತರಾದರು.

3.ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?

ಶುಭ್ರವಾದ ಬಿಳಿಯ ಉದ್ದನೆಯ ಅಂಗಿ, ಪಂಚೆ, ತಲೆಯ ಮೇಲೊಂದು ಅಂದವಾಗಿ ಶಿಸ್ತಿನಿಂದ ಸುತ್ತಿದ ಕಾವಿ ಬಣ್ಣದ ಪೇಠ, ಹಣೆಯಲ್ಲಿ ಸದಾ ಎದ್ದುಕಾಣುವ ವಿಭೂತಿ, ಹುಬ್ಬುಗಳೆರಡರ ನಡುವೆ ಗಂಧದ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿಮಾಲೆ, ಕೊಂಚವೇ ಬಾಗಿದ ಕತ್ತು, ಕೈಯಲ್ಲೊಂದು ಊರುಗೋಲು, ಇವು ಪುಟ್ಟರಾಜರ ವೇಷಭೂಷಣಗಳು.

4. ಪುಟ್ಟರಾಜರಿಗೆ ದೊರೆತ ಗೌರವ ಪ್ರಶಸ್ತಿಗಳಾವುವು?

ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ 35ಕ್ಕೂ ಅಧಿಕ ಕೃತಿಗಳನ್ನು ರಚಿಸಿ ತ್ರಿಭಾಷಾ ಕವಿಯಾದರು. ಅವರ ಸಾಧನೆಗೆ ನಾಡೋಜ, ಬಸವಶ್ರೀ, ಪದ್ಮಭೂಷಣ ಮತ್ತು ಗೌರವ ಡಾಕ್ಟರೇಟ್ ಮುಂತಾದ ಗೌರವ ಪ್ರಶಸ್ತಿಗಳು ಸಾಲುಗಟ್ಟಿ ಬಂದವು.

**ಇ) ಸಂದರ್ಭದೊಡನೆ ವಿವರಿಸಿ**

1. "ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ"

ಈ ವಾಕ್ಯವನ್ನು ರಮೇಶಗೌಡ ಎಂ.ಕೆ. ರವರು ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಪುಟ್ಟರಾಜರು ತನ್ನ ತಾಯಿಗೆ ಹೇಳಿದ್ದಾರೆ. ತಾಯಿ ಮಗನನ್ನು ಮನೆಗೆ ಬರುವಂತೆ ಕೇಳಿಕೊಂಡಾಗ, ನಿನ್ನ ಮಗನೆಂಬ ಭಾವವನ್ನು ತೊರೆದು ಹಾಕಿ ನನ್ನನ್ನು ಸಮಾಜಕ್ಕೆ ಅರ್ಪಿಸು ತಾಯಿ ಎಂದು ತಾಯಿಯ ಪಾದವನ್ನು ಹಿಡಿದು ಮೇಲಿನ ಮಾತನ್ನು ಹೇಳುತ್ತಾರೆ.

2. ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು.

ಈ ವಾಕ್ಯವನ್ನು ರಮೇಶಗೌಡ ಎಂ.ಕೆ. ರವರು ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಎಂಟು ವರ್ಷದ ಬಾಲಕ ಪುಟ್ಟಯ್ಯನನ್ನು ಕುರಿತು ಹೇಳುವಾಗ ಹೇಳಿದ್ದಾರೆ. ಪುಟ್ಟಯ್ಯ ತನ್ನ ಎಲ್ಲ ಸಹಪಾಠಿಗಳಿಗಿಂತ ಬಲುಬೇಗ ಗುರುಗಳು ಹೇಳಿದ್ದನ್ನು ಗ್ರಹಿಸಿ ಕಲಿತುಕೊಂಡರು. ಗುರುಶಿಷ್ಯರಿಬ್ಬರು ಅಂಧರು. ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು ಎಂದು ಲೇಖಕರು ಹೇಳಿದ್ದಾರೆ.

| **ಗದ್ಯಪಾಠ–04.** | **ಹಕ್ಕಿಗೂಡುಗಳ ನಿಗೂಢ ಜಗತ್ತು.** | **– ಶ್ರೀ. ಕೆ.ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ** |
|---|---|---|

**I**.ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಸಸ್ತನಿಗಳ ಆಶ್ರಯದಾಣಗಳು ಯಾವುವು?

ಗುಹೆ, ಪೊಟರೆ, ಗೂಡು, ಬಿಲದಂಥ ಜಾಗಗಳು.

2. ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ?

'ಸ್ಪರ್ಶ ಸಂಜೀವಿನಿಯ' ಪಾಠ ಹೇಳುತ್ತವೆ.

3. ಹಕ್ಕಿ ಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?

ಹಕ್ಕಿ ಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನದ ಸಮನ್ವಯತೆ ಇದೆ.

4. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವವು?

ಹಕ್ಕಿಯ ದೇಹ ಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ–ಬೇಟೆ.

5. ಅಮೇರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು?

ಗಾಲ್ಫ್ ಚೆಂಡು, ನೀಲಿ ಸೀಸೆಯ ಚೂರು, ಈರುಳ್ಳಿ ಸಿಪ್ಪೆ ಮತ್ತು ಸಣ್ಣ ಬೊಂಬೆಯೊಂದನ್ನು ತಂದು ಗೂಡನ್ನು ಅಲಂಕರಿಸಿತ್ತು.

6. ಅಸಂಖ್ಯಾತ ಮೊಟ್ಟೆಗಳನ್ನಿಟ್ಟು ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುವ ಪ್ರಾಣಿಗಳಾವುವು?

ಮೀನು, ಕಪ್ಪೆ, ಮತ್ತು ಸರೀಸೃಪ ಪ್ರಾಣಿಗಳು.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ?

ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ, ಕಾವು ಗುಟುಕು ಪಡೆದ ಜೀವ ಕಣ್ತೆರವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಈ ಅವಘಡಗಳನ್ನು ಎದುರಿಸಿ ಬದುಕುವ ಸಾಹಸ ಗಾಥೆ ಇದೆ. ಕಲಾವಿದನು ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನವೂ ಸಹ ಸಮನ್ವಯಗೊಂಡಿದೆ.

2. ಹಕ್ಕಿಗೂಡಿನ ವಿಶೇಷತೆಳೇನು?

ಅವು ಕೆಲವು ಕೀಟ, ಉರುಗ ಸಂತತಿ ಮತ್ತು ಹಲವೂ ಸಸ್ತನಿಗಳಂತೆ ಸುಂದರವಾಗಿ ಗೂಡು ಕಟ್ಟುತ್ತವೆ. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ. ಅವು ಸಿಮೆಂಟ್ ಗಾರೆಯಂಥ ವಸ್ತುಗಳಿಗಿಂತಲೂ ಭಿನ್ನವಾದ ವಸ್ತುಗಳನ್ನು ಬಳಸಬಲ್ಲವು. ಒಳಗೋಡೆಯ ಗೊಡೆಯನ್ನು ಪ್ಲಾಸ್ಟರ್ ಮಾಡಬಲ್ಲವು. ಸೌಂದರ್ಯಪ್ರಜ್ಞೆ ಅವಕ್ಕಿದೆ.

3. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?

ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ, ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು ಅವುಗಳಿಗೆ ಗೂಡು ಬೇಕು. ಮರುಭೂಮಿಯಂಥ ಪ್ರದೇಶಗಳಲ್ಲಿ ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು, ಮೊಟ್ಟೆ ಮರಿಗಳನ್ನು ರಕ್ಷಿಸಿಕೊಳ್ಳಲು, ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಅವು ಗೂಡನ್ನು ನಿರ್ಮಿಸಿ ಕೊಳ್ಳುತ್ತವೆ.

4. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?

ಸಾಗರದದ್ವೀಪ, ಗಿರಿ, ಶಿಖರದನೆತ್ತಿ, ಮನುಷ್ಯ ನುಸಳಲಾರದ ನಿಬಿಡ ವನಶ್ರೇಣಿ, ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ, ರಕ್ತ ಹೆಪ್ಪುಗಟ್ಟಿಸುವ ಶೀತಲ ಧ್ರುವ ಪ್ರದೇಶ– ಹೀಗೆ ಎಲ್ಲೆಲ್ಲೂ ಅವು ಗೂಡು ಕಟ್ಟಬಲ್ಲವು.

5. ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತದೆ?

ಕೆಲವು ಹಕ್ಕಿಗಳಿಗೆ ವಿಪರೀತ ಅಲಂಕಾರ ಪ್ರಜ್ಞೆ ಇದೆ. ಅವು ವರ್ಣಮಯ ಹೂದಳವನ್ನು ಅಥವಾ ಹೊಳೆವ ಕಲ್ಲುಗಳನ್ನು ಹೆಕ್ಕಿ ತಂದು ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳಂತೂ ಬಣ್ಣದ ಗಾಜಿನ ಚೂರು, ಬಟ್ಟೆಯ ಚಿಂದಿ ಮುಂತಾದವುಗಳನ್ನು ಗೂಡಿಗೆ ತಂದು ಅಲಂಕರಿಸುತ್ತವೆ.

6) ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿ ಗೂಡುಗಳ ವಿಶೇಷತೆಗಳೇನು?

ಇವು ತಮ್ಮ ಗೂಡನ್ನು ಬಹು ಸುಂದರವಾಗಿ ನಿರ್ಮಿಸುತ್ತವೆ. ಕೇವಲ ಎರಡು ಒಣ ಕಡ್ಡಿಯನ್ನು ಅಪ್ಪಿ ಹಿಡಿದಂತೆ ಬಟ್ಟಲಾಕಾರದಲ್ಲಿ ಗೂಡು ನಿರ್ಮಿಸುತ್ತವೆ. ಹೊರಮೈಗೆ ಜೇಡರ ಮೊಟ್ಟೆಗಳ ಕೋಶಗಳನ್ನು ನಿರ್ದಿಷ್ಟ ಅಂತರದಲ್ಲಿ ಜೋಡಿಸಿ ಅಲಂಕರಿಸುತ್ತವೆ. ಶತ್ರುಗಳ ಕಣ್ಣಿಗೆ ಗೂಡು ಗೋಚರಿಸಬಾರದೆಂಬುದು ಇದರ ಉದ್ದೇಶ.

**ಇ) ಸಂದರ್ಭದೊಡನೆ ವಿವರಿಸಿ**

1. ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡತ್ತವೆ.

ಈ ವಾಕ್ಯವನ್ನು ಬಿ.ಎಸ್.ಕೃಪಾಕರ ಮತ್ತು ಕೆ. ಸೇನಾನಿ ಅವರು ಬರೆದಿರುವ 'ಜೀವಜಾಲ' ಎಂಬ ಕೃತಿಯಿಂದ ಆಯ್ದ 'ಹಕ್ಕಿಗೂಡುಗಳ ನಿಗೂಢ ಜಗತ್ತು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಕೋಟ್ಯಂತರ ವರ್ಷಗಳ ವಿಕಾಸ ಕ್ರಿಯೆಯಲ್ಲಿ ಬೆನ್ನುಮೂಳೆಯ ಪ್ರಾಣಿಗಳು ಅಂದರೆ ಮೀನು, ಕಪ್ಪೆ ಮತ್ತು ಸರೀಸೃಪಗಳಂತಹ ಬಹುತೇಕ ಸಂಕುಲಗಳು ಅಸಂಖ್ಯಾತ ಮೊಟ್ಟೆಗಳನ್ನಿಟ್ಟು 'ಅವಕಾಶ ಮತ್ತು ಅದೃಷ್ಟಕ್ಕೆ' ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತದೆ. ಹಕ್ಕಿ ಮತ್ತು ಸಸ್ತನಿಗಳು ಕಡಿಮೆ ಸಂತತಿಗೆ ಜನ್ಮ ನೀಡಿ, ಅವುಗಳ ಲಾಲನೆ, ಪೋಷಣೆ ಮಾಡುತ್ತವೆ ಎಂದು ಲೇಖಕರು ಹೇಳುತ್ತಾರೆ.”

2. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ.

ಈ ವಾಕ್ಯವನ್ನು ಬಿ.ಎಸ್.ಕೃಪಾಕರ ಮತ್ತು ಕೆ. ಸೇನಾನಿ ಅವರು ಬರೆದಿರುವ 'ಜೀವಜಾಲ' ಎಂಬ ಕೃತಿಯಿಂದ ಆಯ್ದ 'ಹಕ್ಕಿಗೂಡುಗಳ ನಿಗೂಢ ಜಗತ್ತು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಲೇಖಕರು ಹಕ್ಕಿಗಳನ್ನು ಕುರಿತು ಹೇಳಿದ್ದಾರೆ. ಒಳಗೊಡೆಯನ್ನು ಪ್ಲಾಸ್ಟರ್ ಮಾಡ ಬಲ್ಲವು. ತನ್ನ ಗೂಡನ್ನು ಸೌಂದರ್ಯ ಗೊಳಿಸುವ ಮತ್ತು ವಾಸ್ತು ಶಿಲ್ಪಿಯ ಕಲ್ಪನೆಗೂ ಮೀರಿ ತನ್ನ ಗೂಡನ್ನು ನಿರ್ಮಿಸಿಕೊಳ್ಳುತ್ತವೆ. ನೈಸರ್ಗಿಕ ವಿಕೋಪಕ್ಕೆ ಶತ್ರುಗಳಿಂದ ರಕ್ಷಿಸಿಕೊಳ್ಳಲು ಸಂತತಿಯ ನಿರ್ವಹಣೆಗೆ ಅವು ಅಪ್ಪಟ ವಾಸ್ತು ಶಿಲ್ಪಿಯಂತೆ ಗೂಡನ್ನು ನಿರ್ಮಿಸಿಕೊಳ್ಳುತ್ತವೆ.

| **ಗದ್ಯ–05.** | **ಕಾಫೀ ಕಪ್ಪು** | **– ಡಾ॥ ಗುರುರಾಜ ಕರ್ಜಗಿ** |
|---|---|---|

**ಕವಿ/ಲೇಖಕರ ಪರಿಚಯ**

- ಡಾ॥ ಗುರುರಾಜ ಕರ್ಜಗಿ ಇವರು ಕ್ರಿ.ಶ. 1952 ರಲ್ಲಿ ಹಾವೇರಿ ಜಿಲ್ಲೆಯ ಕರ್ಜಗಿಯಲ್ಲಿ ಜನಿಸಿದರು.
- ಇವರು 'ಕರುಣಾಳು ಬಾ ಬೆಳಕೆ' ಮತ್ತು ಇಪ್ಪತ್ತಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ರಾಜ್ಯೋತ್ಸವ ಪ್ರಶಸ್ತಿ ಮತ್ತು ಡಾಕ್ಟರೇಟ್ ಪದವಿ ದೊರೆತಿದೆ.

- ಪ್ರಸ್ತುತ ಲೇಖನವನ್ನು 'ಕರುಣಾಳು ಬಾ ಬೆಳಕೆ' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

**I.ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಹೆಡ್ ಮಾಸ್ತರರು ಸಂತೋಷಗೊಂಡದ್ದು ಏಕೆ?
ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ಕಂಡು.
2. ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?
ಬೆಲೆಬಾಳುವ ಕಪ್ಪುಗಳನ್ನು ಆರಿಸಿಕೊಂಡರು.
3. ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಯಾವುದು?
ಉತ್ತಮವಾದದ್ದನ್ನೇ ಪಡೆಯಬೇಕು ಎನ್ನುವ ಆಸೆ. ಬಹುಶಃ ಅದೇ ವಿದ್ಯಾರ್ಥಿಗಳ ತೊಂದರೆಗಳಿಗೆ ಕಾರಣ.
4. ಗುರುಗಳು ಹೇಳಿತಂತೆ ಕಾಫೀ ಮತ್ತು ಕಾಫಿಯ ಕಪ್ಪು ಯಾವುದರ ಪ್ರತೀಕಗಳು?
ಕಾಫೀ ಎಂದರೆ ಜೀವನ ಇದ್ದಂತೆ ಮತ್ತು ಕಾಫಿಯ ಕಪ್ಪು ಹಣ, ಅಂತಸ್ತು ಅಧಿಕಾರದ ಪ್ರತೀಕವಾಗಿದೆ.
5. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು?
ಮತ್ತೊಬ್ಬರ ಕಪ್ಪನ್ನು ನೋಡಿ ಅಸೂಯೆ ಪಡುತ್ತೇವೆ. ಇದು ದುರ್ದೈವದ ಸಂಗತಿ.
6.ಗುರುರಾಜ ಕರ್ಜಗಿ ಅವರ ಅಂಕಣ ಬರಹದ ಶೀರ್ಷಿಕೆ ಯಾವುದು?
ಕರುಣಾಳು ಬಾ ಬೆಳಕೆ.
7. ಗುರುಗಳು ತಿಳಿಸುವಂತೆ ಯಾವುದನ್ನು ಚೆನ್ನಾಗಿ ಆಸ್ವಾದಿಸಬೇಕು?
ಕಾಫಿಯನ್ನು ಚೆನ್ನಾಗಿ ಆಸ್ವಾದಿಸಬೇಕು.
8. ಕಾಫಿಯ ರುಚಿಯನ್ನು ಯಾವುದು ಬದಲಾಯಿಸಲಾರದು?
ಕಾಫಿಯ ರುಚಿಯನ್ನು ಕಪ್ಪು ಬದಲಾಯಿಸಲಾರದು.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ಹಿರಿಯ ವಿದ್ಯಾರ್ಥಿಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?
ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿದ್ದರು. ಒಂದಲ್ಲ ಒಂದು ತಕರಾರು, ಎಲ್ಲ ಕಡೆ ವ್ಯಾಪಾರ ಕಡಿಮೆಯಾಗುತ್ತಿದೆ. ರೂಪಾಯಿ ಬೆಲೆ ಕುಸಿಯುತ್ತದೆ. ಹಣಕ್ಕೆ ಬೆಲೆಯೇ ಇಲ್ಲ, ಮಕ್ಕಳು ಬೆಳೆಯುತ್ತಿದ್ದಾರೆ. ಅವರನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ. ಈ ರೀತಿಯಾಗಿ ತೊಂದರೆಗಳ ಸರಮಾಲೆ ಬೆಳೆಯುತ್ತಿದೆ ಎಂದು ವಿದ್ಯಾರ್ಥಿಗಳು ಹೇಳಿಕೊಳ್ಳುತ್ತಿದ್ದರು.
2. ಹೆಡ್‌ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು?
ಹೆಡ್‌ಮಾಸ್ತರರು ಒಂದೆರಡು ಟ್ರೇನಲ್ಲಿ ಸಮಾರು 30–35 ಕಪ್ಪುಗಳನ್ನು ತಂದಿಟ್ಟರು. ತಂದಿಟ್ಟ ಟ್ರೇನಲ್ಲಿ ಕೆಲವು ಅತ್ಯಂತ ಬೆಲೆ ಬಾಳುವಂತಹವು. ಚೈನಾ ಪಿಂಗಾಣಿಗಳು, ಕೆಲವು ಸುಂದರ ಗಾಜಿನವು, ಕೆಲವು ಪ್ಲಾಸ್ಟಿಕ್ ಕಪ್ಪುಗಳು ಇನ್ನೂ ಕೆಲವು ಏನೂ ಬೆಲೆ ಬಾಳದ ಗಾಜಿನವು ಮತ್ತು ಕೆಲವು ಸ್ಟೀಲಿನ ಲೋಟಗಳು ಇದ್ದವು.
3. ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು?
ಭಗವಂತ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವುದು ಈ ಕಾಫೀ ಮಾತ್ರ. ಕಪ್ಪುಗಳನ್ನಲ್ಲ. ಅವನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಿ ಅಲಂಕಾರಗಳ ಬೆನ್ನತ್ತಿ ಓಡಿ ಓಡಿ ಜೀವನವನ್ನು ಮರೆಯಬೇಡಿ ಸಂತೋಷವಾಗಿರುವವರಿಗೆ ಜೀವನದಲ್ಲಿ ಎಲ್ಲವೂ ಚೆನ್ನಾಗಿರುವುದು ಸಿಕ್ಕಿರಲಿಕ್ಕಿಲ್ಲ. ಎಂದು ಹೆಡ್‌ಮಾಸ್ತರರು ತಿಳಿಸಿದರು.

**ಇ) ಸಂದರ್ಭದೊಡನೆ ವಿವರಿಸಿ**

1 ನೀವು ಗಮನಿಸಿದ್ದೀರಾ ? ನೀವೆಲ್ಲ ಎಂಥೆ ಕಪ್ಪು ಆರಿಸಿಕೊಂಡಿದ್ದೀರಿ?
ಈ ವಾಕ್ಯವನ್ನು ಗುರುರಾಜ ಕರ್ಜಗಿಯವರು ಬರೆದಿರುವ 'ಕರುಣಾಳು ಬಾ ಬೆಳಕೆ' ಎಂಬ ಲೇಖನದಿಂದ ಆಯ್ದ 'ಕಾಫೀ–ಕಪ್ಪು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ
ಈ ವಾಕ್ಯವನ್ನು ಕಾಫೀಯನ್ನು ತಂದಿಟ್ಟು ಕಪ್ಪುಗಳಿಗೆ ಕಾಫೀ ಹಾಕಿಕೊಳ್ಳಲು ಹೇಳುತ್ತಾ ಮೇಲಿನ ಮಾತು ಹೇಳುತ್ತಾರೆ. ಆಸೆಯೇ ತೊಂದರೆಗೆ ಕಾರಣ. ಕಾಫೀ ಜೀವನವನ್ನು, ಕಪ್ಪು ಹಣ, ಆಸೆ, ಅಧಿಕಾರಕ್ಕೆ ಹೋಲಿಸಿ ಜೀವನ ಮಾರ್ಗವನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಕೊಡುತ್ತಾ ಮೇಲಿನ ಮಾತು ಹೇಳುತ್ತಾರೆ.
2. ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಂಡಿದ್ದಾನೆ.
ಈ ವಾಕ್ಯವನ್ನು ಗುರುರಾಜ ಕರ್ಜಗಿಯವರು ಬರೆದಿರುವ 'ಕರುಣಾಳು ಬಾ ಬೆಳಕೆ' ಎಂಬ ಲೇಖನದಿಂದ ಆಯ್ದ 'ಕಾಫೀ–ಕಪ್ಪು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ
ಈ ವಾಕ್ಯವನ್ನು ಹೆಡ್ ಮಾಸ್ಟರ್ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ನಾವು ಕಾಫಿಗಿಂತ ಕಪ್ಪಿಗೆ ಹೆಚ್ಚು ಮಹತ್ವ ಕೊಡುತ್ತೇವೆ. ಮತ್ತು ಬೇರೆಯವರ ಕಪ್ಪನ್ನು ನೋಡಿ ಅಸೂಯೆ ಪಡುತ್ತೇವೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿಕೊಡುತ್ತಾ ಮಾರ್ಗದರ್ಶನ ಮಾಡುತ್ತಾರೆ.

**ಗದ್ಯ–6. ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ –ಬಸವಪ್ರಭು ಪಾಟೀಲ ಬೆಟ್ಟದೂರು ಮತ್ತು ಕೆ.ಸಿದ್ಧಯ್ಯಸ್ವಾಮಿ.**

**I.ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಲಂಡನ್‌ನಲ್ಲಿರುವ ವ್ಯಾಕ್ಸ್ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಹೇಗೆ ಬಂತು?
ಮೇಡಂ ಟುಸ್ಸೋಡ್ ವ್ಯಾಕ್ಸ್ ಗೊಂಬೆಗಳನ್ನು ಮೊದಲು ಮಾಡಿದ್ದರಿಂದ.
2. ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾನಿಲಯಗಳ ಹೆಸರೇನು?
ಕೇಂಬ್ರಿಡ್ಜ್ ಹಾಗೂ ಆಕ್ಸ್‌ಫರ್ಡ್.
3. ಲಂಡನ್ ವಿಶ್ವವಿದ್ಯಾನಿಲಯದ ಮುಂದೆ ಗಾಂಧೀಜಿಯವರ ಪ್ರತಿಮೆಯನ್ನು ಏಕೆ ಸ್ಥಾಪಿಸಲಾಯಿತು?
ಅಲ್ಲಿ ಸ್ವತಃ ಗಾಂಧೀಜಿ ಓದಿದ್ದರಿಂದ.
4. ಥೇಮ್ಸ್ ನದಿ ದಡದಲ್ಲಿರುವ ಜನವಸತಿಯನ್ನು ಲೇಖಕರು ಯಾವುದಕ್ಕೆ ಹೋಲಿಸುತ್ತಾರೆ?
ಮುಂಬಯಿಯ ಸಮುದ್ರ ದಂಡೆಗುಂಟೆ ಇರುವ ಮೆರೀನ್ ಡ್ರೈವ್‌ನಂತೆ ಹೋಲಿಸಿದ್ದಾರೆ.
5. ಲಂಡನ್‌ನ ಭೂ ವಿಸ್ತೀರ್ಣ ಎಷ್ಟು ?
ಲಂಡನ್‌ನ ಭೂ ವಿಸ್ತೀರ್ಣ 610 ಚದುರ ಮೈಲು.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ಥೇಮ್ಸ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಯಾವ ವರ್ಗದ ಜನ ವಾಸಿಸುತ್ತಾರೆ?
ಥೇಮ್ಸ ನದಿಯ ದಕ್ಷಿಣಕ್ಕೆ ಉದ್ಯಮಗಳು, ಫ್ಯಾಕ್ಟರಿಗಳು ಹೆಚ್ಚಾಗಿ ರಾಜಕಾರಣಿಗಳು ಇರುತ್ತಾರಂತೆ. ಉತ್ತರಕ್ಕೆ ವ್ಯಾಪಾರಿಗಳು, ಕಡಿಮೆ ಆದಾಯ ಹೊಂದಿರುವವರು ವಾಸಿಸುತ್ತಾರೆ. ಥೇಮ್ಸ್ ನದಿ ದಂಡೆ ಬದಿಯಲ್ಲಿ ವಾಸಿಸುವರು ಶ್ರೀಮಂತರೇ ಆಗಿರುತ್ತಾರೆ.
2. ಲಂಡನ್ ಟವರ್ ಬ್ರಿಜ್‌ನ ವೈಶೀಷ್ಟವೇನು?
ಥೇಮ್ಸ್ ನದಿಯ ಮೇಲೆ 13 ಬ್ರಿಜ್‌ಗಳಿವೆ. ಅದರಲ್ಲಿ ಟವರ್ ಬ್ರಿಜ್ ಪ್ರಮುಖವಾದದ್ದು. ಇದರ ವಿಶೇಷತೆ ಬಹಳ ಅದ್ಭುತವಾಗಿದೆ. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದೂವರೆ ಎರಡು ನಿಮಿಷದಲ್ಲಿ ಮೇಲಕ್ಕೆದ್ದು ಹಡುಗುಗಳು ಹೋಗಲು ದಾರಿಮಾಡಿಕೊಡುತ್ತದೆ.
3. ಥೇಮ್ಸ್ ನದಿಯ ಮೇಲಿರುವ ಪ್ರಸಿದ್ಧ ಸೇತುವೇಗಳಾವವು?
ಥೇಮ್ಸ್ ನದಿಯ ಮೇಲಿರುವ ವೆಸ್ಟ್ ಮಿನಿಸ್ಟರ್ ಸೇತುವೆ, ವಾಟರ್ಲೂ ಸೇತುವೆ ಮತ್ತು ಲಂಡನ್ ಸೇತುವೆ ಪ್ರಸಿದ್ಧವಾಗಿವೆ.
4. ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರಿಯುತ್ತಾರೆ?
ಟವರ್ ಆಫ್ ಲಂಡನ್ 3–4 ಅಂತಸ್ತಿನ ಚೌಕಾಕಾರದ ಬೃಹತ್ ಕಟ್ಟಡ. ಈ ಕಟ್ಟಡದ ಮೇಲೆ ಟವರ್‌ಗಳಿವೆ. ಇದು ರಾಜರು ತಮಗೆ ಆಗದವರನ್ನು ಕೊಲ್ಲಿಸುವ ಜಾಗ. ರಾಜಮನೆತನಗಳಲ್ಲಿನ ವೈಷಮ್ಯ, ಅಸೂಯೆ, ಕೊಲೆ, ಸುಲಿಗೆಗಳ ತಾಣವಿದು. ರಾಬರ್ಟ್‌ಕ್ಲೈವ್ 1757ರ ಪ್ಲಾಸಿ ಕದನದಲ್ಲಿ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳನ್ನು ಇಲ್ಲಿ ಇಡಲಾಗಿದೆಯಂತೆ. ಆದ್ದರಿಂದ ಇದು ನಿಗೂಢ ಸ್ಥಳವಾಗಿದೆ.

**ಇ) ಸಂದರ್ಭದೊಡನೆ ವಿವರಿಸಿ**

1. **"ಅಲ್ಲಿನ ಒಳ ಥೇಟರ್ ನಲ್ಲಿ 3ಡಿ ಕನ್ನಡಕ ಹಾಕಿಕೊಂಡು ತಾರಾಲಯ ನೋಡಿದೆವು,"**
ಈ ವಾಕ್ಯವನ್ನು ಡಾ. ಬಸವ ಪ್ರಭು ಪಾಟೀಲ ಮತ್ತು ಕೆ.ಸಿದ್ಧಯ್ಯಸ್ವಾಮಿಯವರು ಬರೆದಿರುವ 'ಯೂರೋಪಿನಲ್ಲಿ' ಎಂಬ ಲೇಖನದಿಂದ ಆಯ್ದ 'ಟುಸ್ಸೋಡ್ ವ್ಯಾಕ್ಸ್ ಮ್ಯೂಜಿಯಂ' ಎಂಬ ಗದ್ಯದಿಂದ ಆರಿಸಲಾಗಿದೆ.
ಈ ವಾಕ್ಯವನ್ನು ಲೇಖಕರು ತಾರಾಲಯವನ್ನು ಕುರಿತು ಹೇಳಿದ್ದಾರೆ. ತಮ್ಮ ಸ್ನೇಹಿತನಾದ ಸತೀಶನ ಜೊತೆ ತಾರಾಲಯಕ್ಕೆ ಹೋಗಿದ್ದರು. ತಾರಾಲಯದಲ್ಲಿ 3ಡಿ ಕನ್ನಡಕವನ್ನು ಹಾಕಿದಾಗ ನಕ್ಷತ್ರಗಳು ಕಾಣುತ್ತವೆ ಎಂದು ಹೇಳುವಾಗ ಹೇಳಿದ್ದಾರೆ.
2. **"ಲಂಡನ್ ಮಲಗಿ ನಿದ್ರಿಸುತ್ತದೆಯೇ ಅನಿಸುತ್ತದೆ."**
ಈ ವಾಕ್ಯವನ್ನು ಡಾ. ಬಸವ ಪ್ರಭು ಪಾಟೀಲ ಮತ್ತು ಕೆ.ಸಿದ್ಧಯ್ಯಸ್ವಾಮಿಯವರು ಬರೆದಿರುವ 'ಯೂರೋಪಿನಲ್ಲಿ' ಎಂಬ ಲೇಖನದಿಂದ ಆಯ್ದ 'ಟುಸ್ಸೋಡ್ ವ್ಯಾಕ್ಸ್ ಮ್ಯೂಜಿಯಂ' ಎಂಬ ಗದ್ಯದಿಂದ ಆರಿಸಲಾಗಿದೆ.
ಈ ವಾಕ್ಯವನ್ನು ಲೇಖಕರು ಲಂಡನ್ ನಗರವನ್ನು ಕುರಿತು ಹೇಳಿದ್ದಾರೆ. ಈ ವಾಕ್ಯವನ್ನು ಕೋಶದ ಮೇಲೇರಿದಾಗ ಲಂಡನ್ ನಗರವನ್ನು ನಾಲ್ಕುದಿಕ್ಕಿನಿಂದ ನೋಡಬಹುದು, ಆಗ ಲಂಡನ್ ಸುಂದರವಾಗಿ ಕಾಣುತ್ತದೆ, ನಡುವೆ ಥೇಮ್ಸ್ ನದಿ ಹರಿಯುತ್ತದೆ. ಇದು ಔದ್ಯಮಿಕ ಮತ್ತು ಬ್ಯಾಂಕಿಂಗ್ ನಗರ ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

**ಕವಿ/ಲೇಖಕರ ಪರಿಚಯ**

- ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ಕ್ರಿ.ಶ. 1904 ರಲ್ಲಿ ಕುಪ್ಪಳ್ಳಿಯಲ್ಲಿ ಜನಿಸಿದರು.
- ಇವರು ನನ್ನ ಗೋಪಾಲ, ನವಿಲು, ಪಕ್ಷಿಕಾಶಿ, ಶ್ರೀರಾಮಾಯಣ ದರ್ಶನಂ ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿಗಳು ಲಭಿಸಿವೆ.
- ಪ್ರಸ್ತುತ ನಾಟಕಾಂಶವನ್ನು ಅವರ 'ನನ್ನ ಗೋಪಾಲ' ಕೃತಿಯಿಂದ ಆರಿಸಿಕೊಳ್ಳಲಾಗಿದೆ.

**I. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಗೋಪಾಲನ ಬೆಳಗಿನ ಮುಖ್ಯ ಕೆಲಸ ಏನಾಗಿತ್ತು?
ಬೇಗನೆ ಎದ್ದು ಸ್ನಾನ ಮಾಡಿ ದೇವರ ಪೂಜೆಗೆ ಹೂವುಗಳನ್ನು ಕೊಯ್ದು ತರಬೇಕಾಗಿತ್ತು.
2. ಗೋಪಾಲನಿಗೆ ಬಣ್ಣ ಬಣ್ಣದ ಹೂವುಗಳು ಹೇಗೆ ಕಾಣಿಸುತ್ತಿದ್ದವು?
ಹೂಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣುತ್ತಿತ್ತು.
3. ಗೋಪಾಲನ ಗೆಳೆಯರ ಹೆಸರೇನು?
ರಾಮು, ಕಿಟ್ಟಿ, ನಾಣಿ, ಮಾಧು
4. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯಪಡುತ್ತಿದ್ದನು?
ಕಾಡಿನ ದಾರಿಯಲ್ಲಿ ಕತ್ತಲೆಯಿದ್ದ ಕಾರಣ ಭಯಪಡುತ್ತಿದ್ದನು.
5. ಗೋಪಾಲನು ಹೊಸ ಪಂಚೆಯನ್ನು ಬಯಿಸಿದುದೇಕೆ?
ಗೆಳೆಯರೆಲ್ಲರೂ ಬೆಲೆಯುಳ್ಳ ಬಟ್ಟೆಯನ್ನು ಹಾಕಿಕೊಂಡು ಬರುತ್ತಾರೆ, ಇವನನ್ನು ನೋಡಿ ಹಾಸ್ಯ ಮಾಡುತ್ತಾರೆ. ಆದ್ದರಿಂದ ಅವನು ಹೊಸ ಪಂಚೆಯನ್ನು ಬಯಸಿದನು.
6. ಬನದ ಗೋಪಾಲ ಯಾರು ? ಕಾಡಿನಲ್ಲಿ ಅವನ ಕೆಲಸವೇನು?
ಶ್ರೀಕೃಷ್ಣ, ಅವನು ಕಾಡಿನಲ್ಲಿ ಯಾವಾಗಲೂ ದನ ಕಾಯುತ್ತಾ ಇರುತ್ತಾನೆ.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1.ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತುಗಳಿಂದ ಏಳಿಸಿದಳು?
ಗೋಪಾಲ, ಬೆಳಗಾಯ್ತು, ಮೇಲೇಳು; ನೋಡಲ್ಲಿ, ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದ ತುದಿಯಲ್ಲಿ ತೊಳಗುತ್ತಿದ್ದಾನೆ. ಕೇಳಲ್ಲಿ, ಹಕ್ಕಿಗಳು ಹಾಡುತ್ತ, ಹಾರಾಡಿ ಕರೆಯುತ್ತಿವೆ ನಿನ್ನ. ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ. ಎದ್ದೇಳು ಗೋಪಾಲ. ಶಾಲೆಗೆ ಹೊತ್ತಾಗುತ್ತದೆ. ಗುರುಗಳೇನೆಂದಾರು? ಏಳು ಗೋಪಾಲ. ನನ್ನ ಕಂದಾ. ಎಂದು ಮಗನನ್ನು ಏಳಿಸಿದಳು.
2. ಗೋಪಾಲನು ಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು?
ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು, ಪರ್ವತ ಬಾಳೆಯ ಹೂವು, ಗೋರಂಟೆಯ ಹೂವಿನಿಂದ ಕೂಡಿತ್ತು ಅಲ್ಲಿದ್ದ ಹೂಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು. ಹಕ್ಕಿಗಳ ಇಂಪಾದ ಗಾನ, ತಂಗಾಳಿ, ಸೂರ್ಯದೇವನ ಹೊಂಬೆಳಕು ಹಸಿರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮಮಣಿಗಳು ಮಿರುಗುವ ಲೀಲೆ ಮನೆಗಿಂತ ಬನವೇ ಸೊಗಸಮ್ಮ ಎಂದು ವರ್ಣಿಸಿದನು.
3. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?
ಒಂದು ಸಣ್ಣ ಗುಡಿಸಲಿನಲ್ಲಿ ವಾಸಿಸುತ್ತಿದ್ದಳು, ಅದರ ಜಗಲಿಯ ಮೇಲೆ ಒಂದು ಮೂಲೆಯಲ್ಲಿ ಗೋಪಾಲನ ಸಣ್ಣ ವಿಗ್ರಹವಿರುವ ದೇವರ ಗೂಡು. ಗೋಪಾಲನ ತಾಯಿ ಒಂದು ಚರಕದ ಮುಂದೆ ಕುಳಿತು ನೂಲುತ್ತಿದ್ದಳು. ಗೋಪಾಲ ಹಾಗೂ ಅವನ ತಾಯಿ ನೂಲು ಮಾರಿ ಬಂದ ಮೂರು ಕಾಸಿನಲ್ಲಿ ತಮ್ಮ ಸಂಸಾರವನ್ನು ಸಾಗಿಸುತ್ತಿದ್ದರು.
4. ಬನದ ಗೋಪಾಲನ ವೇಷಭೂಷಣ ಹೇಗಿದ್ದವು ?
ತಲೆಯ ಮೇಲೆ ಸಣ್ಣದೊಂದು ಕಿರೀಟ, ನವಿಲುಗರಿ, ಕೈಲೊಂದು ಕೊಳಲು. ಇವು ಬನದ ಗೋಪಾಲನ ವೇಷಭೂಷಣಗಳಾಗಿದ್ದವು. ಒಬ್ಬಂಟಿಯಾದ ಗೋಪಾಲನನ್ನು ಕಾಡಿನಲ್ಲಿ ಕಂಡು ಸಂರಕ್ಷಿಸಲು ಭಗವಂತನು ಈ ರೀತಿಯ ವೇಷಭೂಷಣದಲ್ಲಿ ಬರುವನು.

**ಇ) ಸಂದರ್ಭದೊಡನೆ ವಿವರಿಸಿ**

1. **'ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು'**
ಈ ವಾಕ್ಯವನ್ನು ಕುವೆಂಪುರವರು ಬರೆದ ನನ್ನ ಗೋಪಾಲ ಎಂಬ ನಾಟಕದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಗೋಪಾಲನು ತನ್ನ ಅಮ್ಮನಿಗೆ ಹೇಳಿದನು. ಬನದಲ್ಲಿ ಕಂಡುಬರುವ ಪ್ರಕೃತಿಯನ್ನು ವರ್ಣಿಸುತ್ತಾ ಮಲ್ಲಿಗೆ ಹೂ, ಕೇದಿಗೆ ಹೂ, ಸಂಪಿಗೆ ಹೂ, ಪರ್ವತಬಾಳೆಯ ಹೂ ಗೋರಂಟಿಯ ಹೂವು ಅರಳಿ ಸಾವಿರಾರು ಮಳೆಬಿಲ್ಲುಗಳು ಕುಣಿದಂತೆ ತೋರುತ್ತಿತ್ತು ಎಂದು ವರ್ಣಿಸುತ್ತಾ ಈ ವಾಕ್ಯವನ್ನು ಹೇಳಿದನು.

2. "ಆ ಗೋಪಾಲನು ಕೊಡಬೇಕು ನಾವು ಉಣಬೇಕು.

ಈ ವಾಕ್ಯವನ್ನು ಕುವೆಂಪುರವರು ಬರೆದ ನನ್ನ ಗೋಪಾಲ ಎಂಬ ನಾಟಕದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಗೋಪಾಲನ ತಾಯಿ ಮಗನಿಗೆ ಹೇಳಿದಳು. ಗೋಪಾಲನು ನನಗೆ ಒಂಟಿಯಾಗಿ ಕಾಡು ದಾಟಿಬರುವಾಗ ಭಯವಾಗುತ್ತದೆ. ನನ್ನ ಗೆಳೆಯರ ಜೊತೆ ಆಳು ಇರುತ್ತಾರೆ. ನನ್ನ ಜೊತೆ ಮಾತ್ರ ಯಾರೂ ಇಲ್ಲ ಎಂದಾಗ ತಾಯಿ ಅವರೆಲ್ಲ ಶ್ರೀಮಂತರು ಎಂದು ಹೇಳುತ್ತಾ ಹೀಗೆ ಹೇಳಿದಳು.

| ಪದ್ಯ–1. | ಏಣಿ | –ಸುಕನ್ಯಾ ಮಾರುತಿ |
|---|---|---|

**ಕವಿ/ಲೇಖಕರ ಪರಿಚಯ**

- ಸುಕನ್ಯಾ ಮಾರುತಿ ಅವರು 1956 ರಲ್ಲಿ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಎಂಬಲ್ಲಿ ಜನಿಸಿದರು.
- ಇವರು 'ನಾನೆಂಬ ಮಾಯೆ', ಬಿಂಬದೊಳಗಣ ಮಾತು, ಪಂಚಾಗ್ನಿಯ ಮಧ್ಯ, ನಾನು ನನ್ನವರು, ತಾಜ ಮಹಲಿನ ಹಾಡು' ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.
- 'ಏಣಿ' ಕವನವನ್ನು ಅವರ 'ಸಮಗ್ರ ಕವನ ಸಂಕಲನ' ಕೃತಿಯಿಂದ ಆರಿಸಿಕೊಳ್ಳಲಾಗಿದೆ.

**I.** ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಏಣಿ ಜನರಿಗೆ ಮಾಡಿದ ಉಪಕಾರವೇನು?

ಜನರನ್ನು ಮೇಲಕ್ಕೆ ಎತ್ತಿ ಹಿಡಿಯುವುದರ ಮೂಲಕ ಉಪಕಾರ ಮಾಡುತ್ತದೆ.

2. ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು?

ಏಣಿ ಅವರು ಹೇಗೆ ಇಳಿಯುತ್ತಾರೆಂದು ಸವಾಲು ಹಾಕುತ್ತದೆ.

3. ಕವಯಿತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?

ಮೇಲಂತಸ್ತಿನ ಮಾನವನನ್ನು,

4. ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ?

ಸಹಾಯ ಮಾಡಿದವರನ್ನು ಮರೆತಾಗ

5. ಏಣಿಗೆ ಬೀಳುವ ಭಯವಿಲ್ಲ ಏಕೆ?

ಆನೆ ಭಾರ ಹೊತ್ತು ಗಟ್ಟಿ ನೆಲದ ಮೇಲೆ ಕಾಲೂರಿದರಿಂದ ಬೀಳುವ ಭಯವಿಲ್ಲ.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು?

ಏಣಿಯು ಮೇಲಂತಸ್ತು ಯಾವಾಗಲೂ ಶಾಶ್ವತವಲ್ಲ. ಅದು ಸುರಕ್ಷಿತವೂ ಅಲ್ಲ. ಆಕಾಶದಲ್ಲಿ ಎಷ್ಟೇ ಹೊತ್ತು ಹಾರಾಡಿದರೂ ಮತ್ತೆ ಅವರು ಕೆಳಗೆ ಇಳಿಯಲೇ ಬೇಕು. ಹಾಗೆಯೇ ಸಹಾಯ ಮಾಡಿದವರನ್ನು ಮರೆಯಬಾರದೆಂದು, ಅವರನ್ನು ಮರೆತರೆ ಅವರಿಗೆ ಒಳಿತಲ್ಲ ಎಂದು ಉಪದೇಶಿಸಿದೆ.

2. ಏಣಿ ಹೇಳಿಕೊಳ್ಳುವ ಕಷ್ಟಗಳೇನು?

ಜನ ಸಾಮಾನ್ಯರು ಅದರ ಮೇಲೆ ಭಾರವನ್ನು ಹಾಕಿ ಮೇಲಕ್ಕೆ ಏರಿದಾಗ ಅದು ಆ ಭಾರವನ್ನು ಕಷ್ಟಪಟ್ಟು ಹೊತ್ತು ನೋವನ್ನು ಅನುಭವಿಸಿದೆ. ಆದರೆ ಏಣಿಯ ಸಹಾಯದಿಂದ ಮೇಲೇರಿದ ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ. ಎಂದು ಏಣಿ ತನ್ನ ಕಷ್ಟಗಳನ್ನು ಹೇಳಿಕೊಳ್ಳುತ್ತದೆ.

3. ಮೇಲೆರಿದವರಿಗೆ ಏಣಿಯ ಮಹತ್ವ ಯಾವಾಗ ಅರಿವಾಗುತ್ತದೆ?

ಮೇಲೇರಿದವರಿಗೆ ಮೇಲಂತಸ್ತು ಶಾಶ್ವತವಲ್ಲ ಮತ್ತು ಸುರಕ್ಷಿತವೂ ಅಲ್ಲ ಎಂಬುದು ಅರಿವಾಗುತ್ತದೆ. ಏಣಿಯ ಸಹಾಯವನ್ನು ಮರೆತು ಮೇಲಂತಸ್ತಿನಲ್ಲಿ ಹಾರಾಡಿ, ನಂತರ ಅವರ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿದಾಗ ಏಣಿಯ ಮಹತ್ವ ಅರಿವಾಗುತ್ತದೆ.

4. ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?

ಯಾವ ಜನಸಾಮಾನ್ಯರಲ್ಲಿ ವಿನಯ, ವಿಧೇಯ ಇರುತ್ತದೆಯೋ ಅಂಥಹ ಜನಸಾಮಾನ್ಯರ ನಮ್ರತೆಗೆ ಕರಗುತ್ತೇನೆಂದು ಹೇಳುತ್ತದೆ.ಯಾರು ಮೇಲೇರಿದರೂ ಸಹ ತನಗೆ ಬೆಲೆ ಕೊಡುತ್ತಾರೋ ಅಂತವರಿಗೆ ತಾನು ಸಹಾಯ ಮಾಡುತ್ತೇನೆ. ಅವರನ್ನು ಕೆಳಗೆ ಬೀಳದಂತೆ ಎತ್ತಿ ಹಿಡಿದು ಅವರ ಏಳಿಗೆಗೆ ಕಾರಣನಾಗುತ್ತೇನೆ ಎಂದು ಹೇಳುತ್ತದೆ.

**ಇ) ಸಂದರ್ಭದೊಡನೆ ವಿವರಿಸಿ**

1. ನಮ್ರತೆಗೆ ನಾ ಕರಗುತ್ತೇನೆ.

ಈ ವಾಕ್ಯವನ್ನು ಸುಕನ್ಯಾ ಮಾರುತಿ ಅವರು ಬರೆದಿರುವ 'ಸಮಗ್ರ ಕವನ ಸಂಕಲನ' ಎಂಬ ಕೃತಿಯಿಂದ ಆಯ್ದ 'ಏಣಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಏಣಿಯು ಜನರ ವಿನಯಕ್ಕೆ ಕರಗುವ ಸಂದರ್ಭದಲ್ಲಿ ಹೇಳುತ್ತದೆ. ಏಣಿಯು ಮೇಲಕ್ಕೇರಿದ ಜನರ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿದಾಗ ಅವರಿಗೆ ಅದು ನಿಲುಕುವುದಿಲ್ಲ ಎಂದು ಹೇಳುತ್ತದೆ. ಅದು ನಮ್ರತೆಗೆ ಕರಗಿ ಬೆಳೆಯ ಬಲ್ಲವರನ್ನು ಮಾತ್ರ ಎತ್ತಿ ಹಿಡಿಯುತ್ತೇನೆ ಎಂದು ಹೇಳುತ್ತದೆ.

| **ಪದ್ಯ–2.** | **ಬೋಧಿವೃಕ್ಷದ ಹಾಡು** | **– ಡಾ॥ ಬಸವರಾಜ ಸಬರದ** |
|---|---|---|

**ಕವಿ/ಲೇಖಕರ ಪರಿಚಯ**

- ಡಾ॥ ಬಸವರಾಜ ಸಬರದ ಅವರು 1954 ರಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ಜನಿಸಿದರು.
- ಇವರು ಪದಕಟ್ಟಿ ಹಾಡೇನ, ನನ್ನವರ ಹಾಡು, ಹೋರಾಟ ಮತ್ತು ನೂರು ಹನಿಗಳು ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ದೇವರಾಜ ಬಹದ್ದೂರು ಪ್ರಶಸ್ತಿ, ಸಾಹಿತ್ಯಶ್ರೀ ಪ್ರಶಸ್ತಿ ಮತ್ತು ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿಗಳು ಲಭಿಸಿವೆ.
- ಪ್ರಸ್ತುತ ಕವನವನ್ನು ಅವರ 'ಪದಕಟ್ಟಿ ಹಾಡೇನ' ಕವನ ಸಂಕಲನದಿಂದ ಆರಿಸಲಾಗಿದೆ.

**I. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ?
ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯೆಂದು ಬಣ್ಣಿಸಿದ್ದಾರೆ.
2. ಸಿದ್ಧಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದನು?
ಪತ್ನಿ, ಮಗ ಹಾಗೂ ಅರಮನೆಯ ಮೋಹವನ್ನು ತೊರೆದನು.
3. ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು?
ನಾಡಿನರ್ಥ ಹೊಳೆಯಿತು.
4. ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು?
ಜನರ ಪ್ರೀತಿಯನ್ನು ಹುಡುಕುತ್ತ ನಾಡಿನತ್ತ ಹೊರಟನು.
5. ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಡಾರ್ಥವೇನು?
ತಪಸ್ಸಿಗಿಂತ ಜೀವ ಪ್ರೀತಿ ದೊಡ್ಡದೆಂದು ಬದುಕಿನ ಗೂಡಾರ್ಥವನ್ನು ಕಂಡು ಕೊಂಡನು.
6. ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?.
ಬುದ್ಧನ ಜೀವನವನ್ನು ಕುರಿತು ತಿಳಿಸುತ್ತದೆ.
7. ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?
ತಪಸ್ಸಿಗಿಂತ ಜೀವಪ್ರೀತಿ ದೊಡ್ಡದೆಂಬ ಬದುಕಿನ ಸತ್ಯವನ್ನು ಅರಿತುಕೊಂಡನು.
8. ಮಹಾ ಬೆಳಕು ಎಲ್ಲಿ ಕಂಡಿತು?
ಬೋಧಿವೃಕ್ಷದಲ್ಲಿ ಮಹಾಬೆಳಕು ಕಂಡಿತು.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ದಾರೆ?
ಕಾಡು ಕಾಡುಗಳಲ್ಲಿ ಅಲೆದ ಅವನಿಗೆ ನಾಡಿನ ಅರ್ಥ ಹೊಳೆಯುತ್ತದೆ. ಕೋಗಿಲೆಯ ಹಾಡು ದೂರದಿಂದ ಕೇಳಿ ಬರುತ್ತದೆ. ಬೆಳ್ಳಿಚುಕ್ಕಿ ಬಾನಿನಲ್ಲಿ ಬೆಳಗುತ್ತದೆ. ಆಗ ಬೋಧಿವೃಕ್ಷದಲ್ಲಿ ಮಹಾ ಬೆಳಕೊಂದು ಕಂಡುಬಂದು ಬುದ್ಧನಿಗೆ ಜ್ಞಾನೋದಯವಾಯಿತು ಎಂದು ಕವಿ ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಬಣ್ಣಿಸಿದ್ದಾರೆ.
2. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?

ಕಾಡಿನ ತುಂಬ ಪ್ರೀತಿಯ ಹೊಳೆಯು ಕೆರೆತುಂಬಿ ಹರಿಯುವಂತೆ ಕಂಡಿತು. ಗೂಡಿನಲ್ಲಿ ಹಕ್ಕಿಗಳ ಹೊಸರಾಗ ಕೇಳಿಸಿತು. ಹೂವಿನ ಮಕರಂದವನ್ನು ಸವಿಯಲು ದುಂಬಿ ಹೂವಿನಿಂದ ಹೂವಿಗೆ ಹಾರಾಡುತ್ತಿತ್ತು. ಎಲ್ಲ ಗಿಡವು ಒಂದನ್ನೊಂದು ಅಪ್ಪಿಕೊಂಡು ಕುಣಿಯುವಂತೆ ಕಾಣುತ್ತಿತ್ತು.

**ಇ) ಸಂದರ್ಭದೊಡನೆ ವಿವರಿಸಿ**

1. ಕಾಡ ತುಂಬಾ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು.

ಈ ವಾಕ್ಯವನ್ನು ಡಾ॥ ಬಸವರಾಜ ಸಬರದ ಅವರು ಬರೆದಿರುವ 'ಪದಕಟ್ಟಿ ಹಾಡೇನ' ಎಂಬ ಕೃತಿಯಿಂದ ಆಯ್ದ 'ಭೋಧಿವೃಕ್ಷದ ಹಾಡು' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಸಿದ್ಧಾರ್ಥನು 'ಬೋಧಿವೃಕ್ಷದ ಕೆಳಗೆ ತಪಸ್ಸು ಮಾಡುವಾಗ ಪ್ರಕೃತಿಯ ಸೌಂದರ್ಯವನ್ನು ಕಾಣುವ ಸಂದರ್ಭದಲ್ಲಿ ಹೇಳಿದ್ದಾರೆ. ಕಾಡಿನಲ್ಲಿರುವ ಪ್ರಕೃತಿಯ ಸೌಂದರ್ಯಗಳು ಅವನ ಮನಸ್ಸನ್ನು ಸೆಳೆಯಿತು. ಹಕ್ಕಿಯೊಂದು ತನ್ನ ಮರಿಗೆ ಗುಟುಕು ನೀರನ್ನು ಕುಡಿಸಿ ಸಂತೋಷದಿಂದ ಆಕಾಶದ ಎತ್ತರಕ್ಕೆ ಹಾರಿ ಹೋಯಿತು. ಇದನ್ನು ಕಂಡ ಸಿದ್ಧಾರ್ಥ ಕಾಡು ತುಂಬ ಪ್ರೀತಿಯ ಹೊಳೆಯು ಕೋಡಿಯಂತೆ ಹರಿಯಿತು ಎಂದು ಕವಿ ಹೇಳಿದರು.

| ಪದ್ಯ–3. | ಸವಿಚೈತ್ರ | –ಬಸವರಾಜ ಸಾದರ |
|---|---|---|

**ಕವಿ/ಲೇಖಕರ ಪರಿಚಯ**

- ಬಸವರಾಜ ಸಾದರ ಅವರು 1955 ರಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ ಜನಿಸಿದರು.
- ಇವರು ಸಿಸಿ ಫಸರ ಸುತ್ತು, ತಪ್ಪಂಡ, ಹೊಸ ಆಲೋಚನೆ ಮತ್ತು ಮೃದುವಾಗಿ ಮುಟ್ಟು ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ, ಜಯತೀರ್ಥ ರಾಜ ಪುರೋಹಿತ ಸ್ಮಾರಕ ಬಹುಮಾನ, ಅ.ಭಾ ಆಕಾಶವಾಣಿ ಸ್ಪರ್ಧೆ ಬಹುಮಾನ ಮುಂತಾದ ಪ್ರಶಸ್ತಿಗಳು ಲಭಿಸಿವೆ.
- ಇವರ 'ಸಿಸಿಫಸರ ಸುತ್ತು' ಕವನ ಸಂಕಲನದಿಂದ ಪ್ರಸ್ತುತ ಪದ್ಯವನ್ನು ಆಯ್ದುಕೊಳ್ಳಲಾಗಿದೆ.

**I. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ?
ಸುಗ್ಗಿ ಬಂದಾಗ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ.
2. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ?
ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ.
3. ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ?
ನೆಲಮುಗಿಲುಗಳ (ಪ್ರಾಣಿ ಪಕ್ಷಿಗಳ) ವಾಲಗ ನಡೆದಿರುತ್ತದೆ.
4.ಚೈತ್ರವು ಮಾಡುವ ಕೆಲಸವೇನು?
ಚೈತ್ರ ಮಾಸದಲ್ಲಿ ಫಲಪುಷ್ಪಗಳು ಸಮೃದ್ಧವಾಗಿ ಜಗದಲ್ಲಿ ಹೊಸ ಕಳೆ ತುಂಬುತ್ತದೆ.
5. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?
ಯುಗಾದಿಯಲ್ಲಿ ಬೇವು ಬೆಲ್ಲ ಹಂಚುವ ಸಂಪ್ರದಾಯವಿದೆ.
6. ಋತುಗಳ ರಾಜ ಯಾವುದು?
ಋತುಗಳ ರಾಜ ವಸಂತ ಋತು.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ಯುಗದ ಆದಿ ತಂದ ಸಂಭ್ರಮವೇನು?
ಯುಗದ ಆದಿ ಎಂದರೆ ನೂತನ ವರ್ಷದ ಆರಂಭವನ್ನು ಸೂಚಿಸುವ ಯುಗಾದಿ ಹಬ್ಬವು ಒಂದು ಸುಖದ ಸಗ್ಗಿಯನ್ನು ತಂದಿದೆ. ಇದರಿಂದಾಗಿ ಜಗತ್ತೆಲ್ಲಾ ಹೊಸ ಕಳೆಯಿಂದ ಕಂಗೊಳಿಸಿದೆ. ಇಡೀ ಪ್ರಕೃತಿ ಹಸಿರಿನಿಂದ ಕೂಡಿದ್ದು ಹೊಸ ಚೈತನ್ಯವನ್ನು ಹೊಂದಿದೆ. ಭೂಮಿತಾಯಿ ನವವಧುವಿನಂತೆ ಶೃಂಗಾರಗೊಂಡಂತೆ ಕಾಣುತ್ತಿದ್ದಾಳೆ.
2 . ಚೈತ್ರದಲ್ಲಿ ಹಕ್ಕಿಗಳು ಕಲರವ ಹೇಗಿರುತ್ತದೆಂದು ಕವಿ ವರ್ಣಿಸಿದ್ದಾರೆ?

ಪ್ರಕೃತಿಯಲ್ಲಿ ಎಲ್ಲೆಲ್ಲೂ ಹೊಸತನ ತುಂಬಿದ್ದು ಬರಡು ಜೀವಕ್ಕೆ ಹೊಸ ಚೈತನ್ಯ ಬಂದಿದೆ. ವೃಕ್ಷರಾಜನ ಸೌಂದರ್ಯ ಸಂತೋಷವನ್ನು ಕಂಡ ಹಕ್ಕಿಗಳೂ ಮುಗಿಲು ಮುಟ್ಟುವಂತೆ ಪಂಚಮ ಸ್ವರದಲ್ಲಿ ಮಧುರವಾಗಿ ಹಾಡುತ್ತದೆ. ಆಕಾಶವು ಪ್ರತಿಧ್ವನಿಸುವಂತೆ ಕಾಣುತ್ತದೆ. ಇದನ್ನು ಕಂಡ ಇತರ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ಶಬ್ದ ಮಾಡುತ್ತವೆ.

3. ಚೈತ್ರದಲ್ಲಿ ನೆಲ ಮುಗಿಲು ವಾಲಗ ನಡೆದಂತೆ ಭಾಸವಾಗುತ್ತದೆ ಏಕೆ?

ಚೈತ್ರ ಮಾಸದಲ್ಲಿ ಇಡೀ ಪ್ರಕೃತಿ ಹೊಸ ಚೈತನ್ಯದಿಂದ ಕಂಗೊಳಿಸುತ್ತಿರುತ್ತದೆ. ಪ್ರಾಣಿ ಪಕ್ಷಿಗಳಲ್ಲಿ ಹೊಸ ಉತ್ಸಾಹ ಕಂಡುಬರುತ್ತದೆ. ಜಗದ ಖಗ, ಪಕ್ಷಿ, ಪ್ರಾಣಿಗಳು ಮೈ ಕೊಡವಿ ಎದ್ದು ಹೊಸ ಕೆಲಸಕ್ಕೆ ಲಗುಬಗೆಯಿಂದ ಎಂದರೆ ಉತ್ಸಾಹದಿಂದ ಹೊಸ ಕೆಲಸಕ್ಕೆ ಹೊರಟಿರುವಂತೆ ಕಾಣುತ್ತದೆ. ಗಿಡ ಮರಗಳು ಚಿಗುರಿ ಹೊಸ ಜೀವೋಲ್ಲಾಸ ತುಂಬಿ ನೆಲಮುಗಿಲ ವಾಲಗವೇ ನಡೆಯುತ್ತಿರುವಂತೆ ಕಾಣುತ್ತದೆ.

**ಇ) ಸಂದರ್ಭದೊಡನೆ ವಿವರಿಸಿ**

1. ನೆಲದಮ್ಮ ನವವಧುವೆ ಆದಳಿಂತು!

ಈ ವಾಕ್ಯವನ್ನು ಬಸವರಾಜ ಸಾದರ ಅವರು ಬರೆದಿರುವ 'ಸಿನಿಫಸರಸುತ್ತು' ಕವನ ಸಂಕಲನದಿಂದ ಆಯ್ದ ಸವಿಚೈತ್ರ ಪದ್ಯದಿಂದ ಆರಿಕೊಳ್ಳಲಾಗಿದೆ.

ಈ ವಾಕ್ಯವನ್ನು ಕವಿ ಚೈತ್ರ ಮಾಸದಲ್ಲಿ ಆಗುವ ಬದಲಾವಣೆಯನ್ನು ಕುರಿತು ಹೇಳಿದ್ದಾರೆ. ಯುಗಾದಿ ಆದಿಯ ಸೊಗಸು ಸುಗ್ಗಿಯನ್ನು ತಂದಿತು. ಜಗಕ್ಕೆಲ್ಲ ಹೊಸ ಕಳೆಯು ತುಂಬಿ ಬಗೆಬಗೆಯ ಬಣ್ಣಗಳ ಬರೆದ ಚೈತ್ರದ ಹಾಗೆ ನೆಲದಮ್ಮ ನವವಧುವೆ ಆದಳು ಎಂದು ಚೈತ್ರಮಾಸದ ಸೌಂದರ್ಯವನ್ನು ವರ್ಣಿಸಿದ್ದಾರೆ.

| **ಪದ್ಯ – 4.** | **ಸದ್ದು ಮಾಡದಿರು** | **– ಸಿ.ಪಿ.ಕೃಷ್ಣಕುಮಾರ್** |
|---|---|---|

**ಕವಿ/ಲೇಖಕರ ಪರಿಚಯ**

- ಸಿ.ಪಿ.ಕೃಷ್ಣಕುಮಾರ್ (ಸಿ.ಪಿ.ಕೆ) ಅವರು 1939 ರಲ್ಲಿ ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದರು.
- ಇವರು ಬೊಗಸೆ, ಕನ್ನಡ ಚತುರ್ಮುಖ, ಕನ್ನಡ ನಾಗಾನಂದ ಮತ್ತು ಪರಿಭಾವನೆ ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮತ್ತು ಚುಟುಕ ರತ್ನ ಪ್ರಶಸ್ತಿ ದೊರೆತಿದೆ.
- ಪ್ರಸ್ತುತ ಕವನವನ್ನು ಅವರ 'ಬೊಗಸೆ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

**I. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ತಿಮಿರಕ್ಕೆ ವೈರಿ ಯಾವುದು?

ತಿಮಿರಕ್ಕೆ ವೈರಿ ದೀಪ

2. ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾರೆ?

ಇಬ್ಬನಿಯು ಸದ್ದು ಗದ್ದಲವಿಲ್ಲದೆ ಮೌನವಾಗಿ ಕರಗುವುದರಿಂದ ಕವಿ ಮಾನವನ ಬದುಕನ್ನು ಇಬ್ಬನಿಗೆ ಹೋಲಿಸಿದ್ದಾರೆ.

3. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?

ಶಾಂತ ರೀತಿಯಿಂದ ಮುಗಿಸಬೇಕೆಂದು ಹೇಳಿದ್ದಾರೆ.

4. ಬದುಕಿನಲ್ಲಿ ಸಿಡುಕು ಮಿಡುಕನ್ನು ತೊರೆದು ಹೇಗಿರಬೇಕೆಂದು ಕವಿ ಹೇಳಿದ್ದಾರೆ?

ಸಿಡುಕು ಮಿಡುಕನ್ನು ತೊರೆದು ಮೌನಿಯಾಗಿರಬೇಕೆಂದು ಕವಿ ಹೇಳಿದ್ದಾರೆ.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳಾವುವು?

ತಟ್ಟೆಯಲ್ಲಿ ಕರ್ಪೂರ ಮೌನವಾಗಿ ಕರಗುತ್ತದೆ. ದೀಪದೆದುರಿಗೆ ಕತ್ತಲು ನಿಶ್ಶಬ್ಧವಾಗಿ ಸರಿಯುತ್ತದೆ. ರವಿಕಿರಣಗಳಿಗೆ ಇಬ್ಬನಿ ಕರಗಿ ನೀರಾಗುತ್ತದೆ. ಯಾವುದೇ ಶಬ್ಧ ಮಾಡದೇ ಹಡಗು ರೇವನ್ನು ಸೇರುತ್ತದೆ. ಹಾಗೆಯೇ ಮಾನವ ಸದ್ದು ಗದ್ದಲವಿಲ್ಲದೆ ಬಾಳಬೇಕು ಎಂದು ಕವಿಗಳು ತಿಳಿಸುತ್ತಾರೆ.

2. ಕೂಗಾಟದ ಬದುಕು ನಿಷ್ಪ್ರಯೋಜಕ ಎಂಬುದಕ್ಕೆ ಕವಿ ನೀಡುವ ನಿದರ್ಶನಗಳಾವುವು?

ಕೂಗಾಡಿ ಹಾರಾಡಿ ಮಾಡುವುದರಿಂದ ಫಲವಿಲ್ಲ. ಇದರಿಂದ ರಂಪ ರಾದ್ಧಾಂತ ಆಗುವುದೇ ಹೊರತು ಪ್ರಯೋಜನವಿಲ್ಲ. ಉದಾ: ಹಸಿ ಸೌದೆ ಬುಸುಗುಟ್ಟು ಹೊಗೆ ಎಬ್ಬಿಸಿದಂತೆ ಸಿಡಿಮದ್ದಿಗೆ ಒಂದೇ ಒಂದು ಕಿಡಿ ಸೋಕಿದ ತಕ್ಷಣ ಅದು ಶಬ್ದ ಮಾಡಿ ಸಿಡಿದೆಳೆಸುವಂತೆ ಇದರಿಂದ ನಷ್ಟವೇ ಹೊರತು ಲಾಭವಿಲ್ಲ. ಆದ್ದರಿಂದ ಸಿಡುಕು ಮಿಡುಕನ್ನು ತೊರೆದು ಮೌನವಾಗಿರಬೇಕೆಂದು ಕವಿ ಹೇಳಿದ್ದಾರೆ.

3. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ ?
ತಟ್ಟೆಯಲ್ಲಿರುವ ಕರ್ಪೂರ ತಾನು ಉರಿದರೂ ಬೆಳಕನ್ನು ನೀಡುತ್ತದೆ. ದೇವರ ಪೂಜೆ, ಆರತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇತರರಿಗೆ ಸಹಾಯ ಮಾಡುತ್ತದೆ. ಆಗ ಯಾವುದೇ ಗದ್ದಲವನ್ನು ಮಾಡದೇ ಮೌನವಾಗಿ ಕರಗುತ್ತದೆ. ಹಾಗೆಯೇ ಮಾನವರೂ ಸಹ ತನಗೆ ಕಷ್ಟವಾದರೂ ಇತರರಿಗೆ ಸಹಾಯ ಮಾಡಬೇಕು. ಯಾವುದೇ ಸದ್ದು ಗದ್ದಲವಿಲ್ಲದೆ ಶಾಂತ ರೀತಿಯಿಂದ ಬಾಳಬೇಕು.

**ಇ) ಸಂದರ್ಭದೊಡನೆ ವಿವರಿಸಿ**
1. 'ಶಾಂತಿಯಲ್ಲಿ ಬದುಕಿ ನೀ ಕರ್ತವ್ಯವನ್ನು ಮುಗಿಸು'
ಈ ವಾಕ್ಯವನ್ನು ಸಿ.ಪಿ.ಕೃಷ್ಣಕುಮಾರ್ ಅವರು ಬರೆದಿರುವ 'ಬೊಗಸೆ' ಎಂಬ ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಲಾಗಿದೆ.
ಈ ವಾಕ್ಯವನ್ನು ಕವಿಯು ಮಾನವನು ಕೆಲಸವನ್ನು ಶಾಂತಿಯಿಂದ ಮುಗಿಸಬೇಕು ಎಂದು ಹೇಳುವ ಸಂದರ್ಭದಲ್ಲಿ ಹೇಳಿದ್ದಾರೆ. ಕರ್ಪೂರವು ತಟ್ಟೆಯೊಳಗೆ ಮೌನದಲ್ಲಿ ಕರಗುವಂತೆ, ದೀಪದೆದುರು ಕತ್ತಲೆ ನಿಲ್ಲದೆ ಸರಿದು ಹೋಗುವಂತೆ, ಬದುಕನ್ನು ಶಾಂತ ರೀತಿಯಲ್ಲಿ ಕರ್ತವ್ಯವನ್ನು ಮುಗಿಸಬೇಕು, ಯಾರಿಗೂ ಅರಿವಾಗದಂತೆ ಮಾಡಬೇಕು.
2. "ಸಿಡುಕು ಮಿಡುಕನ್ನು ತೊರೆದು ಮೌನಿಯಾಗು"
ಈ ವಾಕ್ಯವನ್ನು ಸಿ.ಪಿ.ಕೃಷ್ಣಕುಮಾರ್ ಅವರು ಬರೆದಿರುವ 'ಬೊಗಸೆ' ಎಂಬ ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಲಾಗಿದೆ.
ಈ ವಾಕ್ಯವನ್ನು ಕವಿಯು ಹೇಳಿದ್ದಾರೆ. ಮನುಷ್ಯ ಜೀವನದಲ್ಲಿ ಹಸಿ ಸೌದೆಯಂತೆ ಬುಸುಗುಟ್ಟುವಂತೆ, ಸಿಡಿಮದ್ದು ಬರೇ ಸದ್ದು ಮಾಡುವಂತೆ ಬದುಕದೆ, ರವಿಕಿರಣಕ್ಕೆ ಮೌನವಾಗಿ ಇಬ್ಬನಿಯು ಕರಗುವಂತೆ ಸಿಡುಕು ಮಿಡುಕನ್ನು ತೊರೆದು, ಮೌನವಾಗಿ ಬಾಳುವುದನ್ನು ಕಲಿಯಬೇಕೆಂದು ಕವಿ ಹೇಳಿದ್ದಾರೆ.

| **ಪದ್ಯ – 5.** | **ಗುರಿ** | **–ಎಂ.ಗೋಪಾಲಕೃಷ್ಣ ಅಡಿಗ** |
|---|---|---|

**ಕವಿ/ಲೇಖಕರ ಪರಿಚಯ**

- ಗೋಪಾಲಕೃಷ್ಣ ಅಡಿಗ ಅವರು 1918 ರಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಗೇರಿ ಎಂಬಲ್ಲಿ ಜನಿಸಿದರು.
- ಇವರು ಭಾವತರಂಗ, ಭೂಮಿಗೀತಾ, ಆಕಾಶದೀಪ ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರಕಿವೆ.
- ಪ್ರಸ್ತುತ ಕವನವನ್ನು ಅವರ 'ಸಮಗ್ರ ಕಾವ್ಯ' ದಿಂದ ಆರಿಸಲಾಗಿದೆ.

**1.ಪ್ರಶ್ನೆಗಳು :**
**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**
1.ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕುಬಾರದು ಏಕೆ?
ಮನುಷ್ಯನ ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು. ಏಕೆಂದರೆ, ಅಂತಹ ಸುಳಿಗೆ ಸಿಲುಕಿದರೆ ಮನುಷ್ಯನು ಜೀವನಪೂರ್ತಿ ಆಶ್ರಯವಿರದೇ ತೊಳಲುತ್ತಾನೆ.
2. ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ?
ನಾವು ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ದುಡಿದಾಗ ನಮ್ಮ ದುಡಿಮೆಯ ಹೂವು ಫಲಿಸುತ್ತದೆ.
3. ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು?
ಹಿಡಿದ ಒಂದು ಒಳ್ಳೆಯ ದಾರಿಯಲ್ಲಿ ಕೊನೆಯವರಿಗೂ ಹೊನಲೊಳಗೆ ಬಾಳ್ವೆಯನ್ನು ಮಾಡಬೇಕು.
4. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?
ಅಡಿಗರು ಒಂದೇ ಹೆಗ್ಗುರಿಗೆ ಹಗಲಿರುಳು ಹೋರಾಡಬೇಕೆಂದು ಹೇಳುತ್ತಾರೆ..
5. ಅಡಿಗರು ತಿಳಿಸುವಂತೆ ನರನಲ್ಲಿ ಯಾರ ರೂಪವನ್ನು ಕಾಣಬೇಕಾಗಿದೆ?
ನರನಲ್ಲಿ ನಾರಾಯಣನ ರೂಪವನ್ನು ಕಾಣಬೇಕಾಗಿದೆ.
**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**
1) ನಮ್ಮ ಬದುಕು ಕೆಸರಿನ ಕಮಲದಂತಿರಬೇಕು ಏಕೆ ?
ಕಮಲವು ಮೇಲೆ ಬಾಂದಳವನ್ನು ನೋಡುತ್ತ, ಹೊಳೆಯುವ ಸೂರ್ಯನ ಕಿರಣಗಳ ಸಿರಿಗೆ ಮೆರೆದಾಡುತ್ತ ವಿಜೃಂಭಿಸುತ್ತದೆ. ಹಾಗೆಯೇ ಮಾನವ ತನ್ನ ಧ್ಯೇಯದ ಕಾರ್ಯಕ್ಕೆ ವಶವಾಗಬೇಕು. ಗುರಿಯನ್ನು ಮುಟ್ಟಿ ಮನುಜತೆಯ ಸಾರ್ಥಕತೆಯನ್ನು ಪಡೆಯಬೇಕು. ಆದ್ದರಿಂದ ನಮ್ಮ ಬದುಕು ಕೆಸರಿನ ಕಮಲದಂತಿರಬೇಕು.

2) ಅಡಿಗರು ಯಾವುದನ್ನು ಹೇಡಿತನ ಹಾಗೂ ಹೆಣ್ತನ ಎಂದು ಕರೆದಿದ್ದಾರೆ ?
ಕವಿ ಅಡಿಗರು ಗಾಳಿ ಬಂದೆಡೆ ತಿರುಗುವುದು ಹೇಡಿತನವೆನ್ನುತ್ತಾರೆ. ಅಂದರೆ ದೊರೆತ ಯಾವುದೋ ಕೆಲಸವನ್ನು ಮಾಡುತ್ತೇನೆ ಎನ್ನುವುದು ಹೇಡಿತನ. ಹಾಗೂ ದಾಳಿ ಬಂದೊಡನೆ ಶರಣಾಗುವುದು ಹೆಣ್ತನ ಎಂದು ಹೇಳಿದ್ದಾರೆ. ಅಂದರೆ ಯಾವುದೇ ವಿರೋಧ ಪರಿಸ್ಥಿತಿಯನ್ನು ಎದಿರಿಸಲು ಸಾಧ್ಯವಾಗದೇ ಸೋಲನ್ನು ಒಪ್ಪಿಕೊಳ್ಳುವುದು.
3) ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು ಏಕೆ ?
ಒಂದು ಬಾಣಕೆ ಒಂದೇ ಗುರಿಯಿರುತ್ತದೆ, ಒಂದು ದೇಹದೊಳಗೆ ಒಂದೇ ಆತ್ಮವಿರುತ್ತದೆ. ಒಂದು ಜೀವನಕ್ಕೆ ಹಲವು ಸಾಧ್ಯತೆಗಳು ಇರಲು ಸಾಧ್ಯವಿಲ್ಲ. ಆದ್ದರಿಂದ ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು. ಹಗಲಿರುಳು ಒಂದೇ ಹೆಗ್ಗುರಿಗೆ ಹೋರಾಡಬೇಕೆಂದು ಹೇಳಿದ್ದಾರೆ.
4) ಜೀವನದಲ್ಲಿ ಒಂದೇ ಗುರಿ ಇರಬೇಕು ಎಂಬುದಕ್ಕೆ ಅಡಿಗರು ನೀಡುವ ನಿದರ್ಶನಗಳಾವುವು ?
ಬದುಕಿಗೊಂದು ಗುರಿ ಇಲ್ಲದಿದ್ದರೆ ಎಲ್ಲಿಗೆ ಹೋಗಬೇಕೆಂದು ಗೊತ್ತಾಗದೆ, ಅಪಾರವಾದ ಕಡಲಲ್ಲಿ ಚುಕ್ಕಾಣಿಯಿಲ್ಲದ ನೌಕೆಯನ್ನು ನಡೆಸಿದಂತಾಗುತ್ತದೆ. ಒಂದು ಬಾಣಕ್ಕೆ ಒಂದೇ ಗುರಿ ಇರುತ್ತದೆಯೇ ಹೊರತು ಹಲವು ಗುರಿಗಳು ಇರುವುದಿಲ್ಲ. ಒಂದು ದೇಹದಲ್ಲಿ ಒಂದೇ ಆತ್ಮವಿರುತ್ತದೆಯೇ ಹೊರತು ಎರಡು ಆತ್ಮಗಳು ಇರುವುದಿಲ್ಲ. ಹಾಗೆಯೇ ಒಂದು ಜೀವನಕ್ಕೆ ಒಂದೇ ಗುರಿ ಇರಲೇಬೇಕು.

**ಇ) ಸಂದರ್ಭದೊಡನೆ ವಿವರಿಸಿ**

1. **"ದಾಳಿ ಬಂದೊಡನೆ ಶರಣೆಂಬ ಹೆಣ್ತನವು"**

ಈ ವಾಕ್ಯವನ್ನು ಎಂ.ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಸಂಕಲನದಿಂದ ಆಯ್ದ ಗುರಿ ಎಂಬ ಪದ್ಯದಿಂದ ಆರಿಸಲಾಗಿದೆ.
ಈ ವಾಕ್ಯವನ್ನು ಕವಿಯು ಹೇಳಿದ್ದಾರೆ. ಮನುಷ್ಯ ಜೀವನದಲ್ಲಿ ಒಂದೇ ಗುರಿ ಹೊಂದಿರಬೇಕು. ಗಾಳಿ ಬಂದ ಕಡೆ ತಿರುಗುವಂತ ಹೇಡಿತನವು ಬೇಡವೆಂದು ಹೇಳುವಾಗ ಕವಿ ಹೇಳುತ್ತಾರೆ. ದಾಳಿ ಬಂದೊಡನೆ ಶರಣೆಂಬ ಹೆಣ್ತನವು ಬೇಡ ಎಂದು ತಿಳಿಸಿದ್ದಾರೆ. ಹೇಡಿತನವಿದ್ದರೆ. ಏನನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳುವಾಗ ಹೇಳಿದ್ದಾರೆ.

2. **"ಒಂದು ಜೀವನಕೇಕೆ ಹಲವು ಸಾಧ್ಯಗಳು"**

ಈ ವಾಕ್ಯವನ್ನು ಎಂ ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಸಂಕಲನದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.
ಈ ವಾಕ್ಯವನ್ನು ಕವಿಯು ಹೇಳಿದ್ದಾರೆ. ಒಂದು ಬಾಣಕ್ಕೆ ಒಂದೇ ಗುರಿ ಇರುವಂತೆ ಒಂದು ದೇಹದೊಳಗೆ ಒಂದೇ ಆತ್ಮವು ಇರುವ ಹಾಗೆ ಈ ಜೀವನದಲ್ಲಿ ಅವಕಾಶ ಒಂದೇ ಬಾರಿ ಸಿಗುತ್ತದೆ. ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಎಂದು ತಿಳಿಸುತ್ತಾ, ಈ ಮಾತನ್ನು ಹೇಳಿದ್ದಾರೆ. ಒಂದೇ ಹೆಗ್ಗುರಿಯ ಸಾಧನೆಗಾಗಿ ಹಗಲಿರುಳು ಹೋರಾಡಬೇಕೆಂದು ಕವಿ ಹೇಳಿದ್ದಾರೆ.

| **ಪದ್ಯ–06** | **ಮೂಡಲ್ ಕುಣಗಲ್ ಕೆರೆ** | **ಜನಪದಗೀತೆ** |
|---|---|---|

**I.ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಕುಣಿಗಲ್ ಕೆರೆಯು ಯಾವ ದಿಕ್ಕಿನಲ್ಲಿದೆ?
ಮೂಡಲ ದಿಕ್ಕಿನಲ್ಲಿದೆ.
2. ಕುಣಿಗಲ್ ಕೆರೆ ಹೇಗೆ ಬಾಗಿದೆ?
ಬಾಳೆಯ ಹಣ್ಣಿನಂತೆ ಬಾಗಿದೆ.
3. ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ?
ನಿಂಬೆಯ ಹಣ್ಣಿಗೆ ಹೋಲಿಸಲಾಗಿದೆ.
4. ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ?
ಶಿವನು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ.
5. ಕೆರೆಯಲ್ಲಿ ಯಾವ ಮೀನುಗಳಿದ್ದವು?
ಕೆರೆಯಲ್ಲಿ ಬಾಳೆಮೀನುಗಳಿದ್ದವು.
6.ಕುಣಿಗಲ್ ಕೆರೆ ಹೇಗೆ ತಂಬಿದೆ?
ಕುಣಿಗಲ್ ಕೆರೆ ನಿಂಬೆಯ ಹಣ್ಣಿನಂತೆ ತುಂಬಿದೆ.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1.ಕುಣಿಗಲ್ ಕೆರೆ ಎಂಥವರನ್ನು ಬೆರಗುಗೊಳಿಸುವಂತಿತ್ತು ಏಕೆ? 'ಅಥವಾ' ಕುಣಿಗಲ್ ಕೆರೆಯ ಅಂದವನ್ನು ಹೇಗೆ ವರ್ಣಿಸಲಾಗಿದೆ?

ಕುಣಿಗಲ್ ಕೆರೆ ನೋಡುವವರಿಗೆ ಒಂದು ವೈಭೋಗವೆಂಬಂತೆ ಇದೆ. ಅದು ಮನಸ್ಸಿಗೆ ಆನಂದವನ್ನು ನೀಡುವಂತೆ ಕಾಣುತ್ತಿತ್ತು. ಇದು ಸಂತೆಯ ಹಾದಿಯಲ್ಲಿದ್ದು, ಕಲ್ಲುಕಟ್ಟೆಯಿಂದ ಇದು ಸುಂದರವಾಗಿ ನಿರ್ಮಾಣಗೊಂಡಿತ್ತು. ಇದು ಬಾಳೆಯ ಹಣ್ಣಿನಂತೆ ಬಾಗಿಕೊಂಡು, ನಿಂಬೆಯ ಹಣ್ಣಿನಂತೆ ತುಂಬಿಕೊಂಡಂತೆ ಕಾಣಿಸುತ್ತಿತ್ತು. ಇದು ತನ್ನ ಸೌಂದರ್ಯದಿಂದಾಗಿ ಎಂಥವರನ್ನು ಬೆರಗುಗೊಳಿಸುವಂತೆ ಕಾಣಿಸುತ್ತಿತ್ತು.

2. ಭಾವ ಬಣ್ಣದ ಸೀರೆಯನ್ನು ತಂದಿದ್ದು ಏಕೆ?

ಕೆರೆ ತುಂಬಿದ ಸಂದರ್ಭದಲ್ಲಿ ಬಾಗಿನ ಅರ್ಪಿಸುವುದು ವಾಡಿಕೆಯಾಗಿದೆ. ಬಾಗಿನ ಕೊಡುವಾಗ ಪೂಜಾ ಸಾಮಗ್ರಿಯೊಂದಿಗೆ ಖುಷಿಯಿಂದ ಸೀರೆ, ಕುಪ್ಪಸ, ಹಣ್ಣು ಹಂಪಲುಗಳನ್ನು ತಂದು ನೀರಿಗೆ ಬಿಡುವುದು ಇಲ್ಲಿನ ವಾಡಿಕೆ. ಕೆರೆ ತುಂಬಿದ ಖುಷಿಗೆ ಭಾವನು ಬಣ್ಣದ ಸೀರೆಯನ್ನು ಬಾಗಿನ ಅರ್ಪಿಸಲು ತಂದಿದ್ದಾನೆ.

3. ಕುಣಿಗಲ್ ಕೆರೆಯ ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?

ಕುಣಿಗಲ್ ಕೆರೆಯಲ್ಲಿ ಜಲಚರಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಮೀನುಗಾರಿಕೆ ಕೃಷಿಕರ ಉಪಕಸುಬಾಗಿದೆ. ಈ ಕೃಷಿಕರು ಕೆರೆಯ ಮೀನುಗಳನ್ನು ಹಿಡಿಯಲು ಬಲೆ ಬೀಸುತ್ತಾರೆ. ಅದರಲ್ಲಿ ಸಿಕ್ಕಿಕೊಂಡ ಮೀನುಗಳು ಉಸಿರಾಡಲಾರದೆ ವಿಲವಿಲ ಒದ್ದಾಡುತ್ತವೆ. ಮೀನುಗಳ ಈ ಒದ್ದಾಡುವ ಪರಿಯನ್ನು ಹೇಳುವ ಸಂದರ್ಭದಲ್ಲಿ ಬೊಬ್ಬೆ ಹೊಡೆಯುತ್ತವೆ ಎಂದು ಹೇಳಲಾಗಿದೆ.

4.ಕುಣಿಗಲ್ ಕೆರೆಯು ನೀರುಂಡು ಬೆಳೆದ ಬಾಳೆಯನ್ನು ಜನಪದರು ಏನೆಂದು ವರ್ಣಿಸಿದ್ದಾರೆ?

'ಅಥವಾ' ಹೊಂಬಾಳೆ ನಡುಗ್ಯಾವ ಎಂದರೇನು?

ಕುಣಿಗಲ್ ಕೆರೆಯು ಬಹಳ ಅಂದವಾಗಿದ್ದು ಅದರ ದಡದಲ್ಲಿ ಬಾಳೆಮರಗಳಿವೆ. ಅವು ನೀರುಂಡು ದಷ್ಟಪುಷ್ಟವಾಗಿ ಬೆಳೆದು ನಿಂತಿವೆ. ಬಾಳೆಯ ಗಿಡಗಳು ಗಾಳಿಯ ಹೊಯ್ದಾಟಕ್ಕೆ ಅತ್ತಿತ್ತ ತೂಗಾಡುತ್ತವೆ. ಹೀಗಾಗಿ ಹಣ್ಣಿನ ಭಾರದಿಂದ ತೂಗಾಡುತ್ತಿರುವ ಬಾಳೆಯನ್ನು ಜನಪದರು ಹೊಂಬಾಳೆ ನಡುಗ್ಯಾವ ಎಂದು ವರ್ಣಿಸಿದ್ದಾರೆ.

**ಇ) ಸಂದರ್ಭದೊಡನೆ ವಿವರಿಸಿ**

1. 'ಭಾವಾ ತಂದಾನೋ ಬಣ್ಣದ ಸೀರೆ'

ಈ ವಾಕ್ಯವನ್ನು ಜನಪದ ಗೀತೆಯಾದ ಮೂಡಲ್ ಕುಣಿಗಲ್ ಕೆರೆ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಜನಪದರು ಹೇಳಿದ್ದಾರೆ. ಕುಣಿಗಲ್ ಕೆರೆಯ ಸೊಬಗು ಸೌಂದರ್ಯವನ್ನು ಬಾಳೆಯ ಹಣ್ಣಿಗೆ ಹೋಲಿಸಲಾಗಿದೆ. ಬಾಳೆಯ ಹಣ್ಣು ಹೇಗೆ ಬಾಗಿದೆ. ಹಾಗೆ ಕೆರೆಯು ಸಹ ಬಾಗಿರುವ ರೀತಿ ಕಾಣಿಸುತ್ತದೆ. ಭಾವ ಎಂದರೆ ಹೆಣ್ಣುಮಗಳಿಗೆ ಎಲ್ಲಿಲ್ಲದ ಅಕ್ಕರೆ. ಆಗಿನ ಕಾಲದಲ್ಲಿ ಮದುವೆ ಆಗುವ ಹುಡುಗ ಅಥವಾ ಮಾವನ ಮಗನನ್ನು ತುಂಬಾ ಅಕ್ಕರೆಯಿಂದ ಕಾಣುತ್ತಿದ್ದರು.

2. 'ಕಪ್ಪಕ್ಕಿ ಬಾಯ ಬಿಡುತಾವೆ'

ಈ ವಾಕ್ಯವನ್ನು ಜನಪದರು ಹೇಳಿದ್ದಾರೆ. ಜನಪದ ಗೀತೆಯಾದ ಮೂಡಲ್ ಕುಣಿಗಲ್ ಕೆರೆ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಕೆರೆಯ ಸೌಂದರ್ಯದಿಂದ ಹಕ್ಕಿಗಳು ಹೇಗೆ ಕಾಣುತ್ತವೆ ಎಂದು ಹೇಳುವಾಗ ಹೇಳಿದ್ದಾರೆ. ಕೆರೆಯ ಅಂದವನ್ನ ನೋಡಲು ಶಿವನು ಬಂದು ಯೋಗಿಯಂತಾಗಿದ್ದಾನೆ. ಅಂದರೆ ಇದರ ಸೊಬಗು ಎಷ್ಟಿರಬಹುದು ಅಲ್ಲದೇ ಕಪ್ಪಗಿರುವ ಹಕ್ಕಿಗಳು ಬಾಯನ್ನು ಬಿಟ್ಟು ನೋಡುತ್ತವೆ ಎಷ್ಟೊಂದು ಸುಂದರವಾಗಿದೆ ಎಂದು ಹೇಳುವಾಗ ಹೇಳಿದ್ದಾರೆ.

3. 'ಬೊಬ್ಬೆ ಹೊಡೆದಾವೆ ಬಾಳ ಮೀನು'

ಈ ವಾಕ್ಯವನ್ನು ಜನಪದ ಗೀತೆಯಾದ ಮೂಡಲ್ ಕುಣಿಗಲ್ ಕೆರೆ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಜನಪದರು ಹೇಳಿದ್ದಾರೆ. ಕೆರೆಯಿಂದ ಯಾವ ಯಾವ ಉಪಯೋಗವಾಗುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಹೇಳಿದ್ದಾರೆ. ಕೆರೆಯಲ್ಲಿ ಹಾರಕ್ಕೊಂದು ಹಾರುಕೋಲು, ಹಾರುವುದಕ್ಕೆ ಹಾಯಿಸುವುದಕ್ಕೆ ಬಳಸುವ ಕೋಲು ಅದನ್ನು ನೂಕಲು ನೂಕುವುದಕ್ಕೆ ಇನ್ನೊಂದು ಕೋಲು ಮತ್ತು ಬಾಳೆ ಹಣ್ಣಿನ ಗಾತ್ರದ ಮೀನುಗಳು ಬೊಬ್ಬೆ ಹಾಕುತ್ತಿವೆ ಅಂದರೆ ಸಂತೋಷದಿಂದ ಕೂಗಿಕೊಳ್ಳುತ್ತವೆ ಎಂದು ಹೇಳಿದ್ದಾರೆ.

| | | |
|---|---|---|
| **ಪದ್ಯ – 7.** | **ವಚನಗಳು** | **– ಬಸವಣ್ಣ, ಸೊನ್ನಲಿಗೆಯ ಸಿದ್ಧರಾಮ, ಅಕ್ಕಮಹಾದೇವಿ.** |

**ಕವಿ/ಲೇಖಕರ ಪರಿಚಯ** **1) ಬಸವಣ್ಣ**

- ಬಸವಣ್ಣನವರು 12 ನೇ ಶತಮಾನದಲ್ಲಿ ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದರು.
- ಇವರು ಬರೆದ ಕೃತಿಗಳು ಬಸವಣ್ಣನವರ ವಚನಗಳು.
- ಇವರ ವಚನಗಳ ಅಂಕಿತ ಕೂಡಲ ಸಂಗಮ ದೇವ.

**2) ಅಕ್ಕಮಹಾದೇವಿ.**

- ಅಕ್ಕಮಹಾದೇವಿ ಅವರು 12 ನೇ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಯ ಉಡುತಡಿ ಎಂಬಲ್ಲಿ ಜನಿಸಿದರು.
- ಇವರು ಬರೆದ ಕೃತಿಗಳೆಂದರೆ ಯೋಗಾಂಗ ತ್ರಿವಿಧಿ ಮತ್ತು ಅಕ್ಕಮಹಾದೇವಿ ವಚನಗಳು.
- ಇವರ ವಚನಗಳ ಅಂಕಿತ ಚೆನ್ನಮಲ್ಲಿಕಾರ್ಜುನ.

## 3)ಸೊನ್ನಲಿಗೆಯ ಸಿದ್ಧರಾಮ

- ಸೊನ್ನಲಿಗೆ ಸಿದ್ಧರಾಮ ಅವರು 12ನೇ ಶತಮಾನದಲ್ಲಿ ಸೊನ್ನಲಿಗೆಯಲ್ಲಿ ಜನಿಸಿದರು.
- ಇವರು ಬರೆದ ಕೃತಿಗಳು ಸೊನ್ನಲಿಗೆ ಸಿದ್ಧರಾಮನ ವಚನಗಳು.
- ಇವರ ವಚನಗಳ ಅಂಕಿತ ಕಪಿಲಸಿದ್ಧ ಮಲ್ಲಿಕಾರ್ಜುನ.

**1. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ?
ಆ ಕಾಲದಲ್ಲಿದ್ದ ಮೂಢನಂಬಿಕೆಗಳನ್ನು ಖಂಡಿಸಿದ್ದಾರೆ.
2. ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ?
ಸಿದ್ಧರಾಮನ ಪ್ರಕಾರ ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಒಂದೇ ಆಗಿರಬೇಕು.
3. ವೇದಾಂತವನ್ನು ಓದಿದವನು ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ?
'ಮಾನವ ಅರ್ಥ ಮಾಡಿಕೊಂಡ ಮೇಲೆ ಬ್ರಹ್ಮನಾಗಬೇಕು.
4. ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ?
ಪುಣ್ಯ ತೀರ್ಥಗಳು ಬರದ ಮೇಲೆ ನಾನಾ ಕೆರೆಗಳನ್ನು ತೋಡಿ ಫಲವಿಲ್ಲವೆಂದು ಹೇಳಿದ್ದಾರೆ.
5. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?
ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ.
6. ಅಕ್ಕಮಹಾದೇವಿಯು ತನ್ನ ಬದುಕು ಯಾವಾಗ ಫಲದಾಯಕ ಆಗುತ್ತದೆಂದು ಹೇಳುತ್ತಾರೆ.?
ಚೆನ್ನ ಮಲ್ಲಿಕಾರ್ಜುನ ದೇವರ ಜ್ಞಾನವಿದ್ದರೆ.
7. ಸೊನ್ನಲಿಗೆ ಸಿದ್ಧರಾಮನ ವಚನಗಳ ಅಂಕಿತ ಯಾವುದು?
ಕಪಿಲಸಿದ್ಧ ಮಲ್ಲಿಕಾರ್ಜುನ.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ?
ಜನರು ನೀರನ್ನು ಕಂಡಲ್ಲಿ ಮುಳುಗುತ್ತಾರೆ. ಮರವನ್ನು ಕಂಡಾಗ ಸುತ್ತುತ್ತಾರೆ. ಹೀಗೆ ಬತ್ತುವ ಜಲವನ್ನು, ಒಣಗಿದ ಮರವನ್ನು ಮೆಚ್ಚಿದವರು ಕೂಡಲಸಂಗಮನನ್ನು ಅರಿಯಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಹೀಗೆ ಆ ಕಾಲದಲ್ಲಿದ್ದ ಮೂಢನಂಬಿಕೆಯನ್ನು ಖಂಡಿಸುತ್ತಾ ಜನರು ಅರ್ಥವಿಲ್ಲದ ಆಚರಣೆಯನ್ನು ದೂರವಿಡಬೇಕು. ಆದುದರಿಂದ ಬಸವಣ್ಣನವರು ಧಾರ್ಮಿಕ ನಂಬಿಕೆಯನ್ನು ಖಂಡಿಸಿದ್ದಾರೆ.
2. ರೂಪಿಸಿದ್ದು ಫಲವೇನು ಗುಣವಿಲ್ಲದನಕ್ಕೆ ಈ ಮಾತಿನ ವೈಶಿಷ್ಟ್ಯವೇನು?
'ಗುಣವಿಲ್ಲದ ಮೇಲೆ ಸುಂದರವಾದ ರೂಪವಿದ್ದು ಫಲವಿಲ್ಲ ಎಂದು ಅಕ್ಕಮಹಾದೇವಿ ವಿವರಿಸಿದ್ದಾರೆ. ಮಾನವನ ರೂಪಕ್ಕಿಂತ ಅವನಲ್ಲಿರುವ ಗುಣವು ಹೆಚ್ಚು ಪ್ರಾಮುಖ್ಯತೆಯನ್ನು ವಹಿಸುತ್ತದೆ. ಆದ್ದರಿಂದ ಮಾನವನ ರೂಪಕ್ಕಿಂತ ಅವನಲ್ಲಿರುವ ಗುಣವು ಮಿಗಿಲಾಗಿದೆ. ರೂಪವಿಲ್ಲದ್ದಿದ್ದರೂ ಒಳ್ಳೆಯ ಗುಣವಿದ್ದಲ್ಲಿ ಎಲ್ಲರೂ ಮೆಚ್ಚುತ್ತಾರೆ

**ಇ) ಸಂದರ್ಭದೊಡನೆ ವಿವರಿಸಿ**

1. "ನೀರ ಕಂಡಲ್ಲಿ ಮುಳುಗುವರಯ್ಯ "
ಈ ವಾಕ್ಯವನ್ನು 'ವಚನಗಳು' ಎಂಬ ಪದ್ಯದಿಂದ ಆರಿಸಲಾಗಿದೆ.
ಈ ವಾಕ್ಯವನ್ನು ಬಸವಣ್ಣನರವರು ಹೇಳಿದ್ದಾರೆ. ಜನರು ನಿಜವಾಗಿ ಹೊಂದಿರಬೇಕಾದ ಭಕ್ತಿಯನ್ನು ವಿವರಿಸುತ್ತಾ ಜನರು ನೀರನ್ನು ಕಂಡಲ್ಲಿ ಮುಳುಗುವರು, ಮರ ಕಂಡಲ್ಲಿ ಸುತ್ತುವರು, ಬತ್ತುವ ಜಲವ ಒಣಗುವ ಮರವ ಮೆಚ್ಚಿದವರು ದೇವರ ಜ್ಞಾನವನ್ನು ತಿಳಿಯುವರೇ? ಎಂದು ಪ್ರಶ್ನಿಸುತ್ತ ಮೂಢನಂಬಿಕೆಯನ್ನು ಖಂಡಿಸುತ್ತ, ಅರ್ಥವಿಲ್ಲದ ಆಚರಣೆ ಬಿಡಬೇಕೆಂದು ತಿಳಿಸುವಾಗ ಹೇಳಿದ್ದಾರೆ.
2. 'ವೇದಾಂತವನೋದಿ ಫಲವೇನಯ್ಯಾ'?
ಈ ವಾಕ್ಯವನ್ನು 'ಸೊನ್ನಲಿಗೆಯ ಸಿದ್ಧರಾಮನ ವಚನಗಳು' ಎಂಬ ಪದ್ಯದಿಂದ ಆರಿಸಲಾಗಿದೆ.
ಈ ವಾಕ್ಯವನ್ನು 'ಸೊನ್ನಲಿಗಿಯ ಸಿದ್ಧರಾಮರು' ವೇದಾಂತದ ವೈಶಿಷ್ಠದ ಬಗ್ಗೆ ವಿವರಿಸುವಾಗ ಹೇಳಿದ್ದಾರೆ. ವೇದಾಂತವು ಹೆಚ್ಚು ಮುಖ್ಯವಾಗಿದೆ. ಇಂದಿನ ಯುಗದಲ್ಲಿ ವೇದಾಂತ ತಿಳಿಯದಿದ್ದರೂ ವೇದಾಂತ ತಿಳಿಯುವಂತೆ ತೋರ್ಪಡಿಕೆ ಮಾಡುತ್ತಾರೆ. ಆದ್ದರಿಂದ ತಾನು ಅರ್ಥ ಮಾಡಿಕೊಂಡು ಬ್ರಹ್ಮನಾಗದ ಮೇಲೆ ವೇದಾಂತವನ್ನು ಓದಿ ಫಲವೇನು? ಎಂದು ಹೇಳಿದ್ದಾರೆ.
3. "ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ"
ಈ ವಾಕ್ಯವನ್ನು 'ವಚನಗಳು' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಅಕ್ಕಮಹಾದೇವಿ ಹೇಳಿದ್ದಾರೆ. ನಿಜವಾದ ಜ್ಞಾನವಿರಬೇಕು. ಎಂದು ವಿವರಿಸುತ್ತಾ, ನೆರಳು ನೀಡದ ಮರ, ಹಾಲು ಕೊಡದ ಹಸು, ಗುಣವಿಲ್ಲದ ರೂಪದಿಂದ ಯಾವ ಫಲವಿಲ್ಲವೋ ಹಾಗೆ ಅನ್ನವಿಲ್ಲದ ತಟ್ಟೆಯಿಂದ ಏನು ಪ್ರಯೋಜನವಿಲ್ಲ ಎಂದು ತಿಳಿಸುವಾಗ ಹೇಳಿದ್ದಾರೆ.

## ಪದ್ಯ –08. ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ –ಕುಮಾರವ್ಯಾಸ ( ಗದುಗಿನ ನಾರಣಪ್ಪ)

**ಕವಿ/ಲೇಖಕರ ಪರಿಚಯ**

- ಕುಮಾರವ್ಯಾಸ (ಗದುಗಿನ ನಾರಣಪ್ಪ) ಇವರು ಗದುಗಿನ ಕೋಳಿವಾಡ ಎಂಬಲ್ಲಿ ಸುಮಾರು 1430 ರಲ್ಲಿ ಜನಿಸಿದರು.
- ಇವರು 'ಕರ್ಣಾಟ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ' ಮತ್ತು ಐರಾವತ ಎಂಬ ಕೃತಿಗಳನ್ನು ಬರೆದಿದ್ದಾರೆ.
- ಇವರು 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದನ್ನು ಪಡೆದಿದ್ದಾರೆ.
- ಪ್ರಸ್ತುತ ಪದ್ಯವನ್ನು 'ಗದುಗಿನ ಭಾರತ' ಎಂಬ ಕಾವ್ಯದಿಂದ ಆಯ್ದುಕೊಂಡಿದೆ.

**I. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?
ವಿಶಾಲವಾದ ಸಮುದ್ರದಂತೆ ಕಾಣಿಸಿತು.
2. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ?
ವಿಸ್ತಾರವಾದ ಸಮುದ್ರದಂತೆ ಕಾಣುವ ಸೈನ್ಯವನ್ನು ಕಂಡು ಯುದ್ಧ ಮಾಡಲು ಹೆದರಿ ಓಡಿದನು,
3. ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ.
ಪಾಪ ಪ್ರಾಪ್ತಿಯಾಗುತ್ತದೆ
4. ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ?
ಉತ್ತರನನ್ನು ಕರೆದಿದ್ದಾನೆ.
5. ಉತ್ತರನಿಗೆ ಇಂದ್ರಪದವಿಯು ಏಕೆ ಬೇಕಿಲ್ಲ?
ಉತ್ತರನಿಗೆ ಅರಸುತನವೆ ಸಾಕು, ಹಾಗಾಗಿ ಇಂದ್ರ ಪದವಿ ಬೇಕಿಲ್ಲ.
6. ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ?
ಅರಮನೆಯ ನಾರಿಯರು ತುಂಬುತ್ತಾರೆ.
7. ಕಾದು ನಡೆ ಎಂದು ಅರ್ಜುನನು ಯಾರಿಗೆ ಹೇಳುತ್ತಾನೆ?
ಉತ್ತರ ಕುಮಾರನಿಗೆ ಹೇಳುತ್ತಾನೆ.
8. ಉತ್ತರನು ರಥದಿಂದ ಹೇಗೆ ಧುಮ್ಮಿಕ್ಕಿದನು?
ಮೈ ಮೇಲಿನ ಸೆರಗನ್ನು ಒಟ್ಟುಗೂಡಿಸಿ ರಥದಲ್ಲಿ ಹಿಂದಕ್ಕೆ ಬಂದು ನಿಂತು ಕೆಳಗೆ ಧುಮುಕಿದನು.

**ಆ) ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

1. ಶತ್ರುಬಲಕ್ಕೆ 'ನಮೋ' ಎಂದು ಉತ್ತರನು ಏಕೆ ಹೇಳಿದನು?
ಕೌರವರ ಸೇನೆಯನ್ನು ಕಂಡ ಉತ್ತರನಿಗೆ ಎಂದೂ ಕಾಣದ ಅದ್ಭುತವನ್ನು ಕಂಡಂತಾಯಿತು. ಇಡೀ ಭೂಮಿ ಸೈನ್ಯದಿಂದ ತುಂಬಿತ್ತು . ಇವರೊಡನೆ ಕಾದಲು ಸಾಕ್ಷಾತ್ ಶಿವನಿಂದ ಮಾತ್ರ ಸಾಧ್ಯ. ಇವರೊಡನೆ ಯುದ್ಧ ಮಾಡಿ ಗೆದ್ದಂತೆಯೇ 'ನಮೋ' ಎಂದು ಓಡಲು ಪ್ರಾರಂಭಿಸಿದನು.
2. ಓಡಲು ಒಡೆವಂತೆ ಅರ್ಜುನನು ಮನದಲ್ಲಿ ನಗಲು ಕಾರಣವೇನು?
ಅರ್ಜುನನು ರಥವನ್ನು ನಾಲ್ಕೆಂಟು ಅಡಿಗಳಷ್ಟು ಮುಂದಕ್ಕೆ ನೂಕಿದನು. ಉತ್ತರನು ಈ ಸಾರಥಿ ನನ್ನನ್ನು ಕೊಂದು ಬಿಟ್ಟನು ಎಂದು ಮೈ ಮೇಲಿನ ಸೆರಗನ್ನು ಒಟ್ಟುಗೂಡಿಸಿ ರಥದಲ್ಲಿ ಹಿಂದಕ್ಕೆ ಬಂದು ನಿಂತು ಕೆಳಗೆ ಧುಮುಕಿದನು. 'ಬದುಕಿದೆ' ಎಂದು ತಲೆಗೂದಲು ಕೆದರಿ ಹಾರಾಡುವಂತಹ ವೇಗದಿಂದ ಓಡಲು ತೊಡಗಿದುದನ್ನು ನೋಡಿ ಅರ್ಜುನನು ಒಡಲು ಒಡೆವಂತೆ ಮನದಲ್ಲಿ ನಕ್ಕನು.
3. 'ಕಾದುನಡೆ' ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು?
ಉತ್ತರನು ಹೆಂಗೆಳೆಯರ ಮುಂದೆ ಕೌರವನ ಸೇನೆಯನ್ನು ಸುಲಭವಾಗಿ ಎದುರಿಸಬಹುದೆಂದು ಬಾಯ್ಗೆ ಬಂದಂತೆ ಮಾತನಾಡಿದನು. ಆದರೆ ಯುದ್ಧದಲ್ಲಿ ಕೌರವ ಸೇನೆಯನ್ನು ಕಂಡು ಹೆದರಿ ಓಡಲು ಪ್ರಾರಂಭಿಸಿದನು. ಆಗ ಅರ್ಜುನನು ಸೈನ್ಯವನ್ನು ಸರಿಯಾಗಿ ಅರಿಯದೆ ಹಲ್ಲುಕಿರಿದು ಮಾತನಾಡಿದ್ದೆ, ಈಗ ಅಂಜುಬುರಕ ನರಿಯಂತೆ ಓಡುವುದು ಸರಿಯಲ್ಲ. ಕಾದುನಡೆ ಎಂದು ಅರ್ಜುನನು ಉತ್ತರನಿಗೆ ಹೇಳಿದನು.

ಇ) ಸಂದರ್ಭದೊಡನೆ ವಿವರಿಸಿ

1. "ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ"

ಈ ವಾಕ್ಯವನ್ನು ಕುಮಾರವ್ಯಾಸನು (ಗದುಗಿನ ನಾರಣಪ್ಪ) ಬರೆದಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಕೌರವ ಸೇನೆಯಮ್ಮು ಕಂಡು ಹೆದರಿದ ಉತ್ತರನು ಕೌರವ ಸೇನೆಯೊಡನೆ ಯುದ್ಧ ಮಾಡಲು ತನ್ನಿಂದ ಸಾಧ್ಯವಿಲ್ಲವೆಂದು ನಿಧಾನವಾಗಿ ರಥದ ಹಿಂದಿನಿಂದ ಧುಮುಕಿ ಬದುಕಿದೆ ಎಂದು ಕೆದರಿದ ತಲೆಯಲ್ಲಿಯೇ ಒಂದೇ ಸಮನೆ ಓಡಲು ಪ್ರಾರಂಭಿಸಿದನು.

2. " ನಾಡನರಿಯೊಲ್ ಹಲುಗಿರಿಯೆ ಬಿಡುವೆನೆ"

ಈ ವಾಕ್ಯವನ್ನು ಕುಮಾರವ್ಯಾಸನು (ಗದುಗಿನ ನಾರಣಪ್ಪ) ಬರೆದಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಅರ್ಜುನ ಉತ್ತರನಿಗೆ ಹೇಳಿದನು. ಉತ್ತರನು ಹೆಂಗೆಳೆಯರ ಮುಂದೆ ಕೌರವ ಸೇನೆಯನ್ನು ಸುಲಭವಾಗಿ ಎದುರಿಸಬಹುದೆಂದು ಬಾಯ್ಗೆ ಬಂದಂತೆ ಮಾತನಾಡಿದನು. ಆದರೆ ಯುದ್ಧರಂಗದಲ್ಲಿ ಕೌರವ ಸೇನೆಯನ್ನು ಕಂಡು ಹೆದರಿ ಓಡಲು ಪ್ರಾರಂಭಿಸಿದನು. ಆಗ ಅರ್ಜುನನು ಹೆಂಗೆಳೆಯರ ಮುಂದೆ ಜಂಭದಿಂದ ಮಾತನಾಡುತ್ತಿದ್ದೆ, ಈಗ ಹಲ್ಲು ಕಿರಿದು ಅಂಜುಬುರುಕ ನರಿಯಂತೆ ಓಡಿಹೋಗಲು ಬಿಡುವುದಿಲ್ಲ 'ಕಾದು ನಡೆ' ಎಂದು ಅರ್ಜುನನು ಉತ್ತರನಿಗೆ ಹೇಳಿದನು.

3. "ಎಮ್ಮರಮನೆಯ ನಾರಿಯರೆ ಸಾಕು"

ಈ ವಾಕ್ಯವನ್ನು ಕುಮಾರವ್ಯಾಸನು (ಗದುಗಿನ ನಾರಣಪ್ಪ) ಬರೆದಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಉತ್ತರನು ಅರ್ಜುನನಿಗೆ ಹೇಳಿದನು. ಕೌರವ ಸೇನೆಗೆ ಹೆದರಿ ಓಡಿ ಹೋಗುತ್ತಿದ್ದ ಉತ್ತರನಿಗೆ ಅರ್ಜುನನು ಈ ರೀತಿ ಯುದ್ಧರಂಗದಿಂದ ಓಡಿಹೋದರೆ ಪಾಪ ಸುತ್ತಿಕೊಳ್ಳುವುದೆಂದು ಹೇಳಿದಾಗ, ಉತ್ತರನು ಯುದ್ಧರಂಗದಿಂದ ಓಡಿಹೋದ ಪಾಪವನ್ನು ಬ್ರಾಹ್ಮಣರು ಹೋಗಲಾಡಿಸುತ್ತಾರೆ. ನನಗೆ ಯುದ್ಧದಲ್ಲಿ ಸೋತು ವೀರ ಸ್ವರ್ಗ ಸೇರುವುದು ಬೇಡ, ಇಂದ್ರ ಪದವಿಯೂ ಬೇಡ ಸುರರ ಸತಿಯರೂ ಬೇಡ, ನನಗೆ ನಮ್ಮ ಅರಮನೆಯ ನಾರಿಯರೇ ಸಾಕು ಎಂದು ಹೇಳುವಾಗ ಈ ವಾಕ್ಯವನ್ನು ಹೇಳಿದ್ದಾರೆ.

* * * * *

## ಪೂರಕ ಓದು

| ಪಾಠ–01. | ಕಳ್ಳರ ಗುರು | –ಬೆಟಗೇರಿ ಕೃಷ್ಣಶರ್ಮ |
|---|---|---|

### ಅಭ್ಯಾಸ ಪ್ರಶ್ನೆಗಳು

1. ವೈದ್ಯರು ತನ್ನ ವೃತ್ತಿಯ ಕುರಿತು ಹೆಂಡತಿ ರತ್ನಳಿಗೆ ಏನು ಹೇಳಿದರು?

" ವೈದ್ಯರು ಈ ವೈದ್ಯಕ ವೃತ್ತಿ ದುಡ್ಡುಗಳಿಸಬೇಕಾದುದ್ದಲ್ಲ! ಕೇವಲ ಸಮಾಜದ ಕ್ಷೇಮ ಸಾಧನೆಗಾಗಿ ಇರುವುದು. ಸಮಾಜದಿಂದ ನಮಗೆ, ಬದುಕಿ ಇರುವ ಮಟ್ಟಿಗೆ ಏನಾದರು ದೊರೆತರೆ ಸಾಕು." ತನ್ನ ಔಷಧಿ ಕುಪ್ಪಿಗೆ ಕಳ್ಳರು ಕೈ ಹಚ್ಚಿಲ್ಲ. ತನ್ನ ವೈದ್ಯಕ ಪ್ರಾವೀಣ್ಯವನ್ನಂತೂ ಯಾರೂ ಕದ್ದೊಯ್ಯಲಾರರು  ಎಂದು ವೈದ್ಯರು ತನ್ನ ವೃತ್ತಿಯ ಬಗ್ಗೆ ತನ್ನ ಹೆಂಡತಿ ರತ್ನಾಳಿಗೆ ಹೇಳಿದರು.

2. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು?

"ಹಾವಿನಂತಹ ದುಷ್ಟ ಜಂತುವು ಕೆಣಕದೆ ಯಾರನ್ನೂ ಹಿಂಸಿಸದು. ಆದರೆ  ಮನುಷ್ಯ? ಮನುಷ್ಯ ಸುಮ್ಮನೆ ಬಿಡುವನೆ? ಅವನ ಆಸೆಯ ಹಾವು ಯಾರು ಕೆಣಕದಿದ್ದರೂ ಎಲ್ಲರನ್ನೂ ಕಡಿಯುವುದು" ಎಂದು ಹಾವನ್ನು ಕಂಡ ವೈದ್ಯರ ತಲೆಯಲ್ಲಿ ವಿಚಾರಗಳು ಮೂಡಿಬಂದವು.

3. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು?

ಭೀಮನಾಯಕನು ವೈದ್ಯರ ಕಾಲ ಮೇಲೆ ಬಿದ್ದು ಹೇಳಿದ 'ಆ ಕಾಣದ ದೇವರು ಇದ್ದಾನೋ ಇಲ್ಲವೋ! ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು ನಿಮ್ಮ ಉಪಕಾರವನ್ನು ಎಂದೂ ಮರೆಯಲಾರೆ!" ಎಂದು  ಹೇಳಿದ ಮರುದಿನ ರಾತ್ರಿ ತಾನು ವೈದ್ಯರ ಮನೆಯಿಂದ ಕದ್ದ ವಸ್ತುಗಳನ್ನೆಲ್ಲಾ ಹಿಂದಿರುಗಿಸುವ ಮೂಲಕ ವೈದ್ಯರಿಗೆ ಕೃತಜ್ಞತೆಯನ್ನು ಸಲ್ಲಿಸಿದನು.

4. ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು ?

"ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ" ಕಾಯುವ ಕೆಲಸಕ್ಕಾಗಿ ಮನಮುಟ್ಟಿ ದುಡಿಯುವವರಿಗೆ ದೇವರ ಸಹಾಯ ಇದ್ದೇ ಇರುತ್ತದೆ." ಎಂದು ವೈದ್ಯರು ನುಡಿದರು. ಈ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು.

5. ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ ಬಗೆ ಹೇಗೆ ?

ಕಳ್ಳರ ಗುರು ಭೀಮನಾಯಕನ ಮಗ ಜ್ವರದಿಂದ ಬಳಲುತ್ತಿದ್ದನು. ವೈದ್ಯರು ಅವನನ್ನು ಬದುಕಿಸಿದರು. ಮಗನ ಪ್ರಾಣ ಉಳಿಸಿದರಲ್ಲ ಎಂದು ಯೋಚಿಸಿ, ಭೀಮನಾಯಕನಿಗೆ ನಾಚಿಕೆಯಾಗಿ, ವೈದ್ಯರ ಮನೆಯಿಂದ ಕದ್ದುತಂದ ಎಲ್ಲ ಸಾಮಾನುಗಳನ್ನು ಮರಳಿ ತಂದು ವೈದ್ಯರಿಗೆ ಒಪ್ಪಿಸಿದನು.

## ಅಭ್ಯಾಸ ಪ್ರಶ್ನೆಗಳು

1) ಬದುಕ ಬದುವ ಬೇಲಿ ಯಾವ ರೀತಿ ಇದೆ ?

ಬದುಕ ಬದುವ ಬೇಲಿಯಲ್ಲಿ ಹೊಂಗಿಯ ಮರದ ಜೋಲಿಯಲ್ಲಿ ಹೂವು ಅರಳಿದೆ. ಅದು ಮಲ್ಲಿಗೆಯಂತಹ ರೂಪವನ್ನು ಹೊಂದಿದ್ದು ಸುಂದರವಾಗಿದೆ. ಹೊಂಗೆಯ ಮರದ ನೆರಳು ತಾಯಿಯ ಪ್ರೀತಿಯನ್ನು ನೀಡುವಂತಿದೆ. ಅದು ವಾತ್ಸಲ್ಯದಿಂದ ಕೂಡಿದ ಹೆತ್ತ ಕರುಳಿನಂತಹ ಮಡಿಲನ್ನು ಹೊಂದಿದ್ದು ಜೀವಿಗಳಿಗೆ ಆಶ್ರಯವಾಗಿದೆ.

2)ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ ?

ಹೊಳೆಯ ದಂಡೆಯು ಹಲವಾರು ನಾಗರಿಕತೆಗಳ ಉಗಮ ಸ್ಥಾನಗಳಾಗಿವೆ. ಹಲವು ಸಾಮ್ರಾಜ್ಯಗಳು ಉದಯವಾಗಿವೆ. ಹಲವು ಸಾಮ್ರಾಜ್ಯಗಳು ಅಳಿದು ಹೋಗಿವೆ. ಶತಮಾನಗಳಿಂದ ನೇಗಿಲಯೋಗಿ ಶ್ರಮವಹಿಸಿ, ಉತ್ತಿ, ಬಿತ್ತಿ, ಬೆಳೆ ಬೆಳೆದ ನೆನಪಿದೆ. ಗೊಬ್ಬರದ ಹಾಡು ಹೊಮ್ಮಿದೆ.. ಜನರು ಮಾಡಿದ ಸಂತೆ, ಜಾತ್ರೆಗಳ ನೆನಪಿದೆ.

3)ನಾಗರಿಕತೆಯ ಬೆಳವಣಿಗೆಯ ಬಗ್ಗೆ ಕವಿಯಿತ್ರಿಗೆ ಯಾವ ಅಳಕು ಇದೆ?

ನಗರಗಳು ಬೆಳವಣಿಗೆ ಹೊಂದುತ್ತಾ ಸಾಗಿದಂತೆ ಅವು ಪ್ರಕೃತಿ ಸಂಪತ್ತನ್ನು ನಾಶಪಡಿಸುತ್ತಿವೆ. ಜನರು ನಗರವನ್ನು ಎಲ್ಲಾ ತಿಂದು ತೇಗಿದ್ದು ಬಗೆಬಗೆಯ ಕಾರೇನು, ಪಟಪಟ ಮೋಟಾರುಗಳೇನು, ಅಲ್ಲಿ ಮೇಲೆ ಲೋಹದ ಹಕ್ಕಿ ಹಾರಾಟವೇನು, ಈ ಎಲ್ಲಾ ಜೀವದ ಇಂಧನ ತೀರುತ್ತಲಿದೆ. ಬದುಕು ನಾಳೆ ಏನೋ ಯಾಕೋ ಏನೋ ಎಂದು ಕವಯಿತ್ರಿಗೆ ಅಳುಕು ಇದೆ.

4). ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ?

ಕವಯಿತ್ರಿಯು ಮನುಕುಲದ ಭವ್ಯ ಬದುಕು ಜೈವಿಕ ಇಂದನದಿಂದ ಅರಳಬೇಕಿದೆ ಎಂದು ಬಯಸಿದ್ದಾರೆ. ತೆಂಗನ್ನು ಬೆಳೆಯುತ್ತಾ, ಅದರಿಂದ ತೈಲಧಾರೆ ಹೊಮ್ಮಿ ಬರಬೇಕು. ಹೊಂಗೆ, ಹಿಪ್ಪೆಗಳ ಜೀವಮೇಳ ನಡೆದು ಅದರಿಂದಲೂ ತೈಲಧಾರೆ ಹೊಮ್ಮಿ ಬರಬೇಕು. ಮುಗಿದು ಹೋಗುತ್ತಿರುವ ತೈಲ ಸಂಪತ್ತನ್ನು ಜೈವಿಕ ಇಂಧನ ಪರ್ಯಾಯ ಇಂಧನವಾಗಿ ಮನುಕುಲವನ್ನು ಬೆಳಗುವುದರ ಮೂಲಕ ಮನುಕುಲದ ಭವ್ಯ ಬದುಕು ಅರಳಬೇಕಿದೆ ಎಂದು ಕವಯಿತ್ರಿ ಹೇಳಿದ್ದಾರೆ.

## ಕಂಠಪಾಠದ ಪದ್ಯಗಳು

***ಬೋಧಿವೃಕ್ಷದ ಹಾಡು ಪದ್ಯ-02 ಡಾ॥ಬಸವರಾಜ ಸಬರದ***

ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು!
ಅರಮನೆಯ ಮೋಹವನ್ನು ಹರಿದುಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು.

***ಸವಿಚೈತ್ರ ಪದ್ಯ-03 ಬಸವರಾಜ ಸಾದರ***

ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು.

**ಗುರಿ ಪದ್ಯ-05 ಎಂ.ಗೋಪಾಲಕೃಷ್ಣಅಡಿಗ**

ಒಂದು ಬಾಣಕೆ ಗುರಿಯು ಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು.

***ವಚನಗಳು ಪದ್ಯ-07 ಬಸವಣ್ಣನವರು***

ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರನ
ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲಸಂಗಮದೇವ

**ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಪದ್ಯ-8 ಕುಮಾರವ್ಯಾಸ (ಗದುಗಿನ ನಾರಣಪ್ಪ)**

ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ

ಪದ್ಯಗಳ ಸಾರಾಂಶಗಳು.

**1. ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ**
**ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ**
**ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ**
**ಎಲ್ಲರೆದೆಗಳ ತುಂಬ ಸವಿಚೈತ್ರವು.**

ಉ. ಈ ಪದ್ಯಭಾಗವನ್ನು ಕವಿ ಬಸವರಾಜ ಸಾದರ ಅವರು ಬರೆದಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆಯ್ದ 'ಸವಿಚೈತ್ರ ಪದ್ಯದಿಂದ ಆರಿಸಲಾಗಿದೆ.

ಕವಿ ಭಾರತೀಯರ ಹೊಸ ವರ್ಷದ ಮೊದಲ ದಿನವಾದ ಯುಗಾದಿಯ ಮಹತ್ವವನ್ನು ತಿಳಿಸುವಾಗ ಈ ರೀತಿ ಹೇಳಿದ್ದಾರೆ. ಯುಗಾದಿ ಹಬ್ಬದ ದಿನದಂದು, ಹಿಂದಿನ ದಿನಗಳಲ್ಲಿ ಮಾಡಿದ ಪಾಪ ಕರ್ಮಗಳ ಕೊಳೆಯನ್ನು ತಿಕ್ಕಿ ಮೈತೊಳೆದುಕೊಂಡು ಶುಚಿಯಾಗಿರುವಂತೆ, ಎಲ್ಲೆಲ್ಲಿ ನೋಡಿದರೂ ನಗುತ್ತಿರುವ ಸಂತೋಷದ ಮುಖಗಳೇ ಕಾಣುತ್ತವೆ. ಯುಗಾದಿಯಂದು ಬೇವು-ಬೆಲ್ಲವನ್ನು ತಿಂದು ಬರಲಿರುವ ಸುಖ-ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಆಚರಣೆ ಇದೆ. ಆದರೆ ಇಲ್ಲಿ ಕವಿ ಬೇವು ಬೆಲ್ಲವನ್ನು ಸಮಾನವಾಗಿ ಕಾಣದೆ, ಸಿಹಿಯಾದ ಬೆಲ್ಲದ ಸ್ಥಾನವನ್ನು ಹೆಚ್ಚಿಸಿ ಅದನ್ನು ಸುಖಕ್ಕೆ ಹೋಲಿಸಿ, ಬೇವಿನ ಕಹಿಯ ಸ್ಥಾನವನ್ನು ಕಡಿಮೆ ಮಾಡಿ ಅದನ್ನು ದುಃಖಕ್ಕೆ ಹೋಲಿಸಿ, ಎಲ್ಲರಲ್ಲಿಯೂ ದುಃಖಕ್ಕಿಂತ ಸುಖವೇ ಹೆಚ್ಚಾಗಿ ಕಾಣುವಂತೆ ಎಲ್ಲರ ಮನದ ತುಂಬ ಸವಿ ಚೈತ್ರವೇ ತುಂಬಿದೆ ಎಂದು ಕವಿ ವರ್ಣಿಸಿದ್ದಾರೆ.

**2. ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ**
**ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ**
**ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ**
**ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.**

ಉ. ಈ ಪದ್ಯಭಾಗವನ್ನು ಕವಿ ಎಂ. ಗೋಪಾಲಕೃಷ್ಣ ಅಡಿಗ ಅವರ 'ಸಮಗ್ರ ಕಾವ್ಯ'ದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಕವಿ ಬದುಕಿನಲ್ಲಿ ಒಂದೇ ಹೆಗ್ಗುರಿ ಇರಬೇಕು. ಅದನ್ನು ಮತ್ತೆ ಮತ್ತೆ ಬದಲಾಯಿಸಬಾರದು ಎಂದು ಈ ರೀತಿ ಹೇಳಿದ್ದಾರೆ. ಕಮಲ ಅಥವಾ ತಾವರೆ ಕೆಸರಿನಲ್ಲಿದ್ದರೂ ಅದು ಆಕಾಶದಲ್ಲಿ ಅತೀ ದೂರದಲ್ಲಿರುವ ಸೂರ್ಯನ ಕಡೆಗೆ ನೋಡುತ್ತಾ ಹೊಳೆಯುವ ಸೂರ್ಯನ ಕಿರಣಗಳ ಸಿರಿಗೆ ಮೆರೆದಾಡುತ್ತಾ ವಿಜೃಂಭಿಸುತ್ತಿರುತ್ತದೆ. ತಾವರೆಯ ಹಾಗೆಯೇ ಮಾನವನೂ ಸಹ ತನ್ನ ಧ್ಯೇಯದ ಕಾರ್ಯಕ್ಕೆ ಸಂಪೂರ್ಣವಾಗಿ ವಶವಾಗಿ ತನ್ನ ಗುರಿಯನ್ನು ಮುಟ್ಟಿ ಸಾರ್ಥಕತೆಯನ್ನು ಪಡೆಯಬೇಕು ಎಂದು ಕವಿ ಅಡಿಗರು ಈ ಪದ್ಯದಲ್ಲಿ ಹೇಳಿದ್ದಾರೆ.

**3. ನೀರ ಕಂಡಲ್ಲಿ ಮುಳುಗುವರಯ್ಯ**
**ಮರನ ಕಂಡಲ್ಲಿ ಸುತ್ತುವರಯ್ಯ**
**ಬತ್ತುವ ಜಲವ ಒಣಗುವ ಮರನ**
**ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲ ಸಂಗಮದೇವ.**

ಉ. ಈ ಪದ್ಯಭಾಗವನ್ನು ಬಸವಣ್ಣನವರು ಬರೆದಿರುವ 'ವಚನಗಳು' ಎಂಬ ಪದ್ಯದಿಂದ ಆರಿಸಲಾಗಿದೆ.

ಬಸವಣ್ಣನವರು ಸಮಾಜದಲ್ಲಿ ಜನಸಾಮಾನ್ಯರು ಮಾಡುವ ಆಚರಣೆಯನ್ನು ಕುರಿತು ಹೇಳುತ್ತಾರೆ. ಜನರು ತಾವು ಮಾಡಿದ ಪಾಪಕರ್ಮಗಳನ್ನು ಪರಿಹರಿಸಿ ಕೊಳ್ಳುವುದಕ್ಕೆ ಪವಿತ್ರವಾದ ನದಿ, ಸರೋವರಗಳಲ್ಲಿ ಭಕ್ತಿ ಭಾವದಿಂದ ಮುಳುಗಿ ಏಳುತ್ತಾರೆ. ಅರಳಿಕಟ್ಟೆ ಮೇಲಿರುವ ಮರಗಳು, ಇನ್ನೂ ಕೆಲವು ಪವಿತ್ರವಾದ ಮರಗಳನ್ನು ಕಂಡರೆ ಸುತ್ತಿ ತಮ್ಮ ಮನದಲ್ಲಿರುವುದನ್ನು ಹೇಳಿಕೊಳ್ಳುತ್ತಾರೆ. ಇಂದಲ್ಲ ನಾಳೆ ಬತ್ತಿ ಹೋಗುವ ನೀರು, ಇಂದಲ್ಲ ನಾಳೆ ಒಣಗಿ ಹೋಗುವ ಮರವನ್ನು ಜನರು ಮೆಚ್ಚಿದ್ದಾರೆ ಇವು ಯಾವೂ ಶಾಶ್ವತವಲ್ಲ. ಆದರೆ ಶಾಶ್ವತವಾಗಿರುವ ಕೂಡಲಸಂಗಮದೇವರಾದ ನಿಮ್ಮನ್ನು ಯಾರೂ ಅರ್ಥಮಾಡಿಕೊಂಡಿಲ್ಲ ಎಂದು ಬಸವಣ್ಣನವರು ಈ ವಚನದಲ್ಲಿ ಜನರ ಆಚರಣೆಯನ್ನು ಟೀಕಿಸಿದ್ದಾರೆ.

**4. ಹಾಕೋಕೊಂದಾರುಗೋಲು ನೂಕೋಕೊಂದೂರುಗೋಲು**
**ಬೊಬ್ಬೆ ಹೊಡೆದವೆ ಬಾಳೆಮೀನು । ತಾನಂದಾನೊ**
**ಬೊಬ್ಬೆ ಹೊಡೆದವೆ ಬಾಳೆಮೀನು.**

ಉ. ಈ ಪದ್ಯಭಾಗವನ್ನು ಜನಪದಗೀತೆಯಾದ 'ಮೂಡಲ್-ಕುಣಿಗಲ್ ಕೆರೆ' ಎಂಬ ಪದ್ಯದಿಂದ ಆರಿಸಲಾಗಿದೆ.

ಜನಪದರು ಮೂಡಲ್ ಕುಣಿಗಲ್ ಕೆರೆಯ ಪ್ರಕೃತಿ ಸೌಂದರ್ಯವನ್ನು ವರ್ಣಿಸುತ್ತಾ ಈ ಕೆರೆಯು ಜನರ ಬದುಕಿನ ಆಸರೆಯಾಗಿರುವುದನ್ನು ಕುರಿತು ಹೇಳಿದ್ದಾರೆ. ಮೂಡಲ್ ಕುಣಿಗಲ್ ಕೆರೆಯು ಕೃಷಿಕರ ಉಪಕಸುಬಾದ ಮೀನುಗಾರಿಕೆ ಜನರ ಬದುಕನ್ನು ನಿರ್ವಹಿಸಲು ಆಸರೆಯ ಊರುಗೋಲಾಗಿದೆ, ಮೀನುಗಳನ್ನು ಹಿಡಿಯುವುದಕ್ಕೆ ದೋಣಿಯನ್ನು ನಡೆಸಲು ಹುಟ್ಟುಬೇಕು ಇದನ್ನೇ ಜನಪದರು ಹಾಕೋಕೊಂದಾರುಗೋಲು ನೂಕೋಕೊಂದೂರುಗೋಲು ಎಂದು ಹೇಳಿದ್ದಾರೆ. ಮೀನುಗಾರರು ಬಲೆಯನ್ನು

ಬೀಸಿ ಮೀನುಗಳನ್ನು ಹಿಡಿಯಲು ಹೋದಾಗ ಬಲೆಯಲ್ಲಿ ಸಿಲುಕಿಕೊಂಡ ಮೀನುಗಳನ್ನು ನೀರಿನಿಂದ ಮೇಲಕ್ಕೆತ್ತಿದಾಗ ವಿಲವಿಲ ಒದ್ದಾಡುವ ಪರಿಯನ್ನು ಬೊಬ್ಬೆ ಹೊಡೆದಾವೆ ಬಾಳೆ ಮೀನುಗಳು ಎಂದು ಜನಪದರು ತುಂಬಾ ಸೊಗಸಾಗಿ ವರ್ಣಿಸಿದ್ದಾರೆ.

**5. "ಕಾಲೂರುವ ನೆಲವನ್ನೇ**
**ತಿರಸ್ಕರಿಸಿದ ಇವರು**
**ಆಕಾಶದಲ್ಲಿ ಎಷ್ಟು ಹೊತ್ತು**
**ಹಾರಾಡುತ್ತಾರೆ?**
**ಮತ್ತೆ ನನ್ನ ಆಸರೆ ಬೇಕೇ ಬೇಕು".**

ಉ. ಈ ಪದ್ಯಭಾಗವನ್ನು ಸುಕನ್ಯಾ ಮಾರುತಿ ಅವರ 'ಸಮಗ್ರ ಕವನ ಸಂಕಲನ' ಕೃತಿಯಿಂದ ಆಯ್ದ 'ಏಣಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಶ್ರಮಿಕರ ಮತ್ತು ಜನಸಾಮಾನ್ಯರ ಸಹಾಯ ಪಡೆದು ಪದವಿ ಅಧಿಕಾರ ಕೀರ್ತಿ, ಹಣ, ಗೌರವ, ಯಶಸ್ಸು ಪಡೆದು ವ್ಯಕ್ತಿ ಮೇಲೇರುತ್ತಾನೆ. ತನ್ನ ಏಳಿಗೆಗೆ ಕಾರಣರಾದವರನ್ನು ಮರೆಯುತ್ತಾನೆ ಎಂದು ಕವಯಿತ್ರಿ ಈ ರೀತಿ ಹೇಳುತ್ತಾರೆ. ನನ್ನ ಆಸರೆ ಪಡೆದು ಮೇಲೇರಿದ ಜನರು ನನ್ನನ್ನೇ ಮರೆತಿದ್ದಾರೆ. ನಾನು ಕಾಲೂರಿ ನಿಂತಿರುವ ನೆಲವನ್ನೇ ತಿರಸ್ಕರಿಸಿದ್ದಾರೆ. ಇವರು ಎಷ್ಟು ಹೊತ್ತು ಮೇಲೆಯೇ ಅಥವಾ ಆಕಾಶದಲ್ಲಿಯೇ ಹಾರಾಡುತ್ತಾರೆ ನಾನೂ ನೋಡುತ್ತೇನೆ. ಮತ್ತು ಅವರು ಅಲ್ಲಿಂದ ಕೆಳಗಿಳಿಯಲೇಬೇಕು ಆಗ ನನ್ನ ಅಸರೆ ಬೇಕೇಬೇಕು ಎಂದು ಏಣಿ ಮೇಲೇರಿದವರಿಗೆ ಪ್ರಶ್ನಿಸುವುದನ್ನು ಕವಯಿತ್ರಿ ತುಂಬಾ ಸೊಗಸಾಗಿ ವರ್ಣಿಸಿದ್ದಾರೆ.

**6. ಮರವ ಅಪ್ಪಿದಂತ ಬಳ್ಳಿ ಹೂವ ಮುಡಿದು ನಕ್ಕಿತು**
**ಹಕ್ಕಿಯೊಂದು ತನ್ನ ಮರಿಗೆ ಗುಟುಕು ಕೊಟ್ಟು ಹಾರಿತು**
**ಹುತ್ತಿನಿಂದ ಇರುವೆ ಗುಂಪು ಸಾಲುಗಟ್ಟಿ ನಡೆಯಿತು**
**ಬೆಳ್ಳಕ್ಕಿ ಹಿಂಡುಗಟ್ಟಿ ಬಾನಿಗೇಣಿ ಹಾಕಿತು.**

ಉ. ಈ ಪದ್ಯಭಾಗವನ್ನು 'ಡಾ. ಬಸವರಾಜ ಸಬರದ' ಅವರು ಬರೆದಿರುವ 'ಪದಕಟ್ಟಿ ಹಾಡೇನ' ಕವನ ಸಂಕಲನದಿಂದ ಆಯ್ದ 'ಬೋಧಿವೃಕ್ಷದ ಹಾಡು' ಎಂಬ ಪದ್ಯದಿಂದ ಆರಿಸಲಾಗಿದೆ.

ಕವಿ ಸಿದ್ಧರ್ಥನು ಬುದ್ಧನಾದ ರೀತಿಯನ್ನು ಮತ್ತು ಯುದ್ಧವನ್ನು ತೊರೆದು ಪ್ರೀತಿ ಕೊಟ್ಟಂತಹ ಕಥೆಯನ್ನು ಕೇಳಿರಿ ಎಂದು ಈ ರೀತಿ ಹೇಳುತ್ತಾರೆ. ಸಿದ್ಧಾರ್ಥನಿಗೆ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾದಾಗ, ಮರವನ್ನು ತಬ್ಬಿಕೊಂಡು ಬೆಳದ ಬಳ್ಳಿಯಲ್ಲಿ ಹೂಗಳು ಅರಳಿ ನಗುತ್ತಿದ್ದವು. ಹಕ್ಕಿಯೊಂದು ತನ್ನ ಮರಿಯ ಬಾಯಿಗೆ ಆಹಾರ ಕೊಟ್ಟು ಹಾರಿತು. ಹುತ್ತದಿಂದ ಇರುವೆಗಳು ಗುಂಪಾಗಿ ಸಾಲುಗಟ್ಟಿ ನಡೆದವು. ಬೆಳಕ್ಕಿಗಳು ಗುಂಪು ಗುಂಪಾಗಿ ಆಕಾಶಕ್ಕೆ ಏಣಿಯನ್ನೇ ಹಾಕುವಂತೆ ಹಾರಾಡುತ್ತಿದ್ದವು ಎಂದು ಕವಿ ಸೊಗಸಾಗಿ ವರ್ಣಿಸುತ್ತಾರೆ.

## ಅಲಂಕಾರಗಳು

**ಉಪಮಾಲಂಕಾರ :**

**ಉದಾ : 1)** ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ.

ಉಪಮೇಯ – ಮಗುವಿನ ಮುಖ
ಉಪಮಾನ – ಚಂದ್ರ
ಉಪಮಾವಾಚಕ – ಅಂತೆ
ಸಮಾನ ಧರ್ಮ – ಚಂದ್ರ ಮತ್ತು ಮಗುವಿನ ಮುಖದಲ್ಲಿರುವ ಮನೋಹರತೆ

ಸಮನ್ವಯ : ಇಲ್ಲಿ ಉಪಮೇಯವಾದ ಮಗುವಿನ ಮುಖವನ್ನು ಉಪಮಾನವಾದ ಚಂದ್ರನಿಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರ.

2. ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ

ಉಪಮೇಯ : ಕುಣಿಗಲ್ ಕೆರೆ
ಉಪಮಾನ : ಬಾಳೆಯ ಹಣ್ಣು
ಉಪಮಾವಾಚಕ : ಅಂತೆ
ಸಮಾನಧರ್ಮ : ಬಾಗುವುದು

ಸಮನ್ವಯ : ಇಲ್ಲಿ ಉಪಮೇಯವಾದ ಕುಣಿಗಲ್ ಕೆರೆಯನ್ನು ಉಪಮಾನವಾದ ಬಾಳೆಯ ಹಣ್ಣಿಗೆ ಹೋಲಿಸಿ ವರ್ಣಿಸಿದೆ. ಆದ್ದರಿಂದ ಇದು ಉಪಮಾಲಂಕಾರ.

3. ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲ್ ಕೆರೆ
ಉಪಮೇಯ : ಕುಣಿಗಲ್ ಕೆರೆ
ಉಪಮಾನ : ನಿಂಬೆಯ ಹಣ್ಣು
ಉಪಮಾವಾಚಕ : ಅಂತೆ
ಸಮಾನಧರ್ಮ : ತುಂಬಿರುವುದು
ಸಮನ್ವಯ : ಇಲ್ಲಿ ಉಪಮೇಯವಾದ ಕುಣಿಗಲ್ ಕೆರೆಯನ್ನು ಉಪಮಾನವಾದ ನಿಂಬೆಯ ಹಣ್ಣಿಗೆ ಹೋಲಿಸಿ ವರ್ಣಿಸಿದೆ. ಆದ್ದರಿಂದ ಇದು ಉಪಮಾಲಂಕಾರ.

4. ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು
ಉಪಮೇಯ : ಬನದ ಹೂಗಳು
ಉಪಮಾನ : ಮಳೆಬಿಲ್ಲು
ಉಪಮಾವಾಚಕ : ಅಂತೆ
ಸಮಾನಧರ್ಮ : ತೋರುತ್ತಿರುವುದು
ಸಮನ್ವಯ : ಇಲ್ಲಿ ಉಪಮೇಯವಾದ ಬನದ ಹೂಗಳನ್ನು ಉಪಮಾನವಾದ ಮಳೆಬಿಲ್ಲಿಗೆ ಹೋಲಿಸಿ ವರ್ಣಿಸಿದೆ. ಆದ್ದರಿಂದ ಇದು ಉಪಮಾಲಂಕಾರ.

5. ಕಾಡತುಂಬ ಪ್ರೀತಿಯ ಹೊಳೆಯು ಕೋಡಿಯಂತೆ ಹರಿಯಿತು
ಉಪಮೇಯ : ಪ್ರೀತಿಯ ಹೊಳೆ
ಉಪಮಾನ : ಕೋಡಿ
ಉಪಮಾವಾಚಕ : ಅಂತೆ
ಸಮಾನಧರ್ಮ : ಹರಿಯುವುದು
ಸಮನ್ವಯ : ಇಲ್ಲಿ ಉಪಮೇಯವಾದ ಪ್ರೀತೀಯ ಹೊಳೆಯನ್ನು ಉಪಮಾನವಾದ ಕೋಡಿಗೆ ಹೋಲಿಸಿ ವರ್ಣಿಸಿದೆ. ಆದ್ದರಿಂದ ಇದು ಉಪಮಾಲಂಕಾರ.

6. ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು
ಉಪಮೇಯ : ಮಾನವನ ಬದುಕು
ಉಪಮಾನ : ಕರ್ಪೂರ ಕರಗುವುದು
ಉಪಮಾವಾಚಕ : ವೊಲ್
ಸಮಾನಧರ್ಮ : ಮೌನದಿ ಶಾಂತಿಯಲಿ ಕರ್ತವ್ಯವನ್ನು ಮುಗಿಸುವುದು
ಸಮನ್ವಯ : ಇಲ್ಲಿ ಉಪಮೇಯವಾದ ಮಾನವನ ಬದುಕನ್ನು ಉಪಮಾನವಾದ ಕರ್ಪೂರ ಕರಗುವುದಕ್ಕೆ ಹೋಲಿಸಿ ವರ್ಣಿಸಿದೆ. ಆದ್ದರಿಂದ ಇದು ಉಪಮಾಲಂಕಾರ.

7. ದೀಪದೆದುರಿಗೆ ತಿಮಿರ ಸರಿಯುವಂತೆ ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು
ಉಪಮೇಯ : ಮಾನವನ ಬದುಕು
ಉಪಮಾನ : ದೀಪದೆದುರಿಗೆ ತಿಮಿರ ಸರಿಯುವುದು
ಉಪಮಾವಾಚಕ : ಅಂತೆ
ಸಮಾನಧರ್ಮ : ಶಾಂತಿಯಲಿ ಕರ್ತವ್ಯವನ್ನು ಮುಗಿಸುವುದು
ಸಮನ್ವಯ : ಇಲ್ಲಿ ಉಪಮೇಯವಾದ ಮಾನವನ ಬದುಕನ್ನು ಉಪಮಾನವಾದ ದೀಪದೆದುರು ತಿಮಿರ ಸರಿಯುವುದಕ್ಕೆ ಹೋಲಿಸಿ ವರ್ಣಿಸಿದೆ. ಆದ್ದರಿಂದ ಇದು ಉಪಮಾಲಂಕಾರ

**ಆ) ರೂಪಕಾಲಂಕಾರ :**
**ಉದಾ :**
1.ಸೀತೆಯ ಮುಖಕಮಲ ಅರಳಿತು
ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ
ಸಮನ್ವಯ : ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಅಭೇದವಾಗಿ ವರ್ಣಿಸಲಾಗಿದೆ. ಆದ್ದರಿಂದ ಇದು ರೂಪಕಾಲಂಕಾರ

2. ಸೇನಾ ಸಾಗರ
ಉಪಮೇಯ : ಸೇನೆ
ಉಪಮಾನ : ಸಾಗರ
ಸಮನ್ವಯ : ಇಲ್ಲಿ ಉಪಮೇಯವಾದ ಸೇನೆಯನ್ನು ಉಪಮಾನವಾದ ಸಾಗರಕ್ಕೆ ಅಭೇದವಾಗಿ ವರ್ಣಿಸಲಾಗಿದೆ. ಆದ್ದರಿಂದ ಇದು ರೂಪಕಾಲಂಕಾರ

3.ಮುಖಚಂದ್ರ
ಉಪಮೆಯ : ಮುಖ
ಉಪಮಾನ : ಚಂದ್ರ
ಸಮನ್ವಯ : ಇಲ್ಲಿ ಉಪಮೇಯವಾದ ಮುಖವನ್ನು ಉಪಮಾನವಾದ ಚಂದ್ರನಿಗೆ ಅಭೇದವಾಗಿ ವರ್ಣಿಸಲಾಗಿದೆ. ಆದ್ದರಿಂದ ಇದು ರೂಪಕಾಲಂಕಾರ.

4. ಕಾಯಕವೇ ಕೈಲಾಸ
ಉಪಮೇಯ : ಕಾಯಕ
ಉಪಮಾನ : ಕೈಲಾಸ
ಸಮನ್ವಯ : ಇಲ್ಲಿ ಉಪಮೇಯವಾದ ಕಾಯಕವನ್ನು ಉಪಮಾನವಾದ ಕೈಲಾಸಕ್ಕೆ ಅಭೇದವಾಗಿ ವರ್ಣಿಸಲಾಗಿದೆ. ಆದ್ದರಿಂದ ಇದು ರೂಪಕಾಲಂಕಾರ.

**5.** ವನಜಮುಖಿ
ಉಪಮೇಯ : ವನಜ
ಉಪಮಾನ : ಮುಖ
ಸಮನ್ವಯ : ಇಲ್ಲಿ ಉಪಮೇಯವಾದ ವನಜಕ್ಕೂ ಉಪಮಾನವಾದ ಮುಖಕ್ಕೂ ಯಾವುದೇ ಭೇದವಿಲ್ಲ. ಆದ್ದರಿಂದ ಇದು ರೂಪಕಾಲಂಕಾರ.

6. ಬಲಗಡಲು
ಉಪಮೇಯ : ಬಲ ( ಸೈನ್ಯ) )
ಉಪಮಾನ : ಕಡಲು
ಸಮನ್ವಯ : ಇಲ್ಲಿ ಉಪಮೇಯವಾದ ಬಲ ಅಂದರೆ ಸೈನ್ಯಕ್ಕೂ ಉಪಮಾನವಾದ ಕಡಲಿಗೂ ಯಾವುದೇ ಭೇದವಿಲ್ಲ. ಆದ್ದರಿಂದ ಇದು ರೂಪಕಾಲಂಕಾರ

## ಗಾದೆಗಳು

1) **ಹಾಸಿಗೆ ಇದ್ದಷ್ಟು ಕಾಲು ಚಾಚು**
ಪೀಠಿಕೆ: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ. **ಹಾಸಿಗೆ ಇದ್ದಷ್ಟು ಕಾಲು ಚಾಚು** ಎಂಬುದು ಕನ್ನಡದ ಜನಪ್ರಿಯ ಗಾದೆಗಳಲ್ಲಿ ಒಂದಾಗಿದೆ.
ವಿವರಣೆ – ನಾವು ನಮ್ಮ ಅರ್ಹತೆಗೆ ತಕ್ಕ ಗುರಿಯನ್ನು, ಆಸೆಯನ್ನು ಹೊಂದಿರಬೇಕು. ಇಲ್ಲದಿದ್ದರೆ ತಿರುಕ ಕಂಡ ಕನಸಿನಂತೆ ಕನಸು ಕನಸಾಗಿಯೇ ಉಳಿಯುತ್ತದೆ. ಮುಂದೆ ಪಡಬಾರದ ಕಷ್ಟವನ್ನು ಪಡಬೇಕಾಗುತ್ತದೆ. ಆದ್ದರಿಂದ ಹಣವನ್ನು ದುಂದುವೆಚ್ಚ ಮಾಡಬಾರದು. ನ್ಯಾಯಯುತವಾಗಿ ಸಂಪಾದಿಸಿದ ಸಂಪಾದನೆಯಲ್ಲಿಯೇ ಜೀವನ ನಡೆಸಬೇಕು ಎಂಬುದು ಮೇಲಿನ ಗಾದೆ ಮಾತಿನ ಅರ್ಥವಾಗಿದೆ.

**2) ಅತಿ ಆಸೆ ಗತಿಗೇಡು**

ಪೀಠಿಕೆ: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ. **ಅತಿ ಆಸೆ ಗತಿಗೇಡು** ಎಂಬುದು ಕನ್ನಡದ ಜನಪ್ರಿಯ ಗಾದೆಗಳಲ್ಲಿ ಒಂದಾಗಿದೆ.

ವಿವರಣೆ: ಮನುಷ್ಯನಿಗೆ ಆಸೆ ಇರಬೇಕು, ಆದರೆ ದುರಾಸೆ ಇರಬಾರದು. ಅತಿಯಾದ ಅಸೆ ದುಃಖಕ್ಕೆ ಕಾರಣವಾಗಿ ಇರುವುದನ್ನು ಕಳೆದುಕೊಂಡು ಗತಿಹೀನರನ್ನಾಗಿ ಮಾಡುತ್ತದೆ. ಉದಾ – ಊಟ ಬಹಳ ರುಚಿಯಾಗಿದೆ ಎಂದು ಹೆಚ್ಚು ತಿಂದರೆ ಅಜೀರ್ಣವಾಗುತ್ತದೆ. ಖ್ಯಾತ ಕವಿ ಡಿ.ವಿ.ಜಿ ಅವರು ಹೇಳುವಂತೆ ಜೀವನದಲ್ಲಿ ಅತಿ ಎಂಬುದು ಎಲ್ಲಿಯೂ ಇಲ್ಲದಿದ್ದರೆ ನೆಮ್ಮದಿಯ ಜೀವನ ನಮ್ಮದಾಗುತ್ತದೆ. ಆದ್ದರಿಂದ ಅತಿ ಆಸೆ ಹೊಂದದೆ ಇದ್ದುದರಲ್ಲಿಯೇ ತೃಪ್ತರಾಗಿರಬೇಕು ಎಂಬುದು ಈ ಗಾದೆಯ ಅರ್ಥ ಹಾಗೂ ಉದ್ದೇಶವಾಗಿದೆ.

**3) ಕೈ ಕೆಸರಾದರೆ ಬಾಯಿ ಮೊಸರು.**

ಪೀಠಿಕೆ: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಬವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ. **ಕೈ ಕೆಸರಾದರೆ ಬಾಯಿ ಮೊಸರು** ಎಂಬುದು ಕನ್ನಡದ ಜನಪ್ರಿಯ ಗಾದೆಗಳಲ್ಲಿ ಒಂದಾಗಿದೆ.

ವಿವರಣೆ: ಕೈ ಕೆಸರಾದರೆ ಬಾಯಿ ಮೊಸರು ಎಂದರೆ ಕಷ್ಟ ಪಟ್ಟು ದುಡಿದರೆ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತದೆ. ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಉದಾಹರಣೆಗೆ ರೈತರು ಸರಿಯಾದ ಸಮಯದಲ್ಲಿ ಹೊಲದಲ್ಲಿ ಉತ್ತಿ ಬಿತ್ತಿ ಬೆಳೆ ಬೆಳೆದರೆ ಮುಂದೆ ಫಸಲು ಸಮೃದ್ಧವಾಗಿ ಸಿಗುತ್ತದೆ. ಆಳಾಗಿ ದುಡಿ ಅರಸನಾಗಿ ಉಣ್ಣು, ಎಂಬ ಗಾದೆಮಾತಿಗೆ ಸಮಾನವಾದ ಗಾದೆಯಾಗಿದೆ. ಇದರಲ್ಲಿ ಕಾಯಕದ ಮಹತ್ವ ಅಡಗಿದೆ.

**4) ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು**

ಪೀಠಿಕೆ: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ. ಎಂಬುದು ಕನ್ನಡದ ಜನಪ್ರಿಯ ಗಾದೆಗಳಲ್ಲಿ ಒಂದಾಗಿದೆ.

ವಿವರಣೆ – ದೇಶದ ಪ್ರಗತಿಯಲ್ಲಿ ಕೃಷಿಯ ಪಾತ್ರ ಹಿರಿದಾದುದು. 'ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು.'ಎಂಬ ಗಾದೆ ಮಾತಿನಂತೆ ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಎಲ್ಲರೂ ಭಿಕ್ಷುಕರಂತಾಗುತ್ತೇವೆ ಜಗತ್ತು ತೊಂದರೆಗೆ ಒಳಗಾಗುತ್ತದೆ. ವಿಜ್ಞಾನ, ತಂತ್ರಜ್ಞಾನ ಎಷ್ಟೇ ಮುಂದುವರೆದರೂ ಆಹಾರವಿಲ್ಲದೆ ಬದುಕುವುದು ಅಸಾಧ್ಯ. ಆದ್ದರಿಂದ ಕೃಷಿಕನೇ ಈ ನಾಡಿನ ಬೆನ್ನೆಲುಬು. ಒಟ್ಟಾರೆಯಾಗಿ ಕೃಷಿಯ ಮಹತ್ವ ತಿಳಿಸುವ ಗಾದೆಮಾತು ಇದಾಗಿದೆ.

5) **'ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ.'**

ಪೀಠಿಕೆ: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಬವಜನ್ಯದಿಂದ ಮೂಡಿ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ವಿಶೇಷ ಅರ್ಥದಿಂದ ಕೂಡಿರುತ್ತವೆ.

ವಿವರಣೆ : ಹಕ್ಕಿಗಳ ಆಶ್ರಯ ತಾಣ ಗೂಡು. ಹಕ್ಕಿಗಳು ತಮ್ಮ ಆಹಾರಕ್ಕೆ ಎಲ್ಲೇ ಹೋಗಿದ್ದರು ಸಂಜೆಯಾದರೆ ತಮ್ಮ ತಮ್ಮ ಗೂಡುಗಳಿಗೆ ಹಿಂತಿರುಗುತ್ತವೆ. ಹಕ್ಕಿ ಮತ್ತು ಗೂಡಿಗೆ ಅವಿನಾಭಾವ ಸಂಬಂಧವಿದೆ. ಅದರಂತೆ ತಾಯಿ ಮತ್ತು ಮಕ್ಕಳಲ್ಲಿಯೂ ಅನೋನ್ಯವಾದ ಪ್ರೀತಿಯ ಸಂಬಂಧವಿದೆ ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಪ್ರತಿಯೊಬ್ಬರಿಗೂ ಕಣ್ಣಿಗೆ ಕಾಣುವ ದೇವರೆಂದರೆ ತಾಯಿಯಾಗಿದ್ದಾಳೆ. 'ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ' ಮೇಲಿನ ಗಾದೆಗೆ ಸಮಾನ ಅರ್ಥಕೊಡುವ ಗಾದೆ ಮಾತಾಗಿದೆ.

## ಪ್ರಬಂಧಗಳು

**1) ಪರಿಸರ ಸಂರಕ್ಷಣೆಯ ಇಂದಿನ ಅಗತ್ಯ:**

ಪೀಠಿಕೆ: – ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ, ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ.

ವಿಷಯ ನಿರೂಪಣೆ: – ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ. ಇದಕ್ಕೆಪ್ರತಿಯಾಗಿ ಪ್ರಕೃತಿಯು ನೆರೆ ಹಾವಳಿ, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ, ಅಕಾಲವೃಷ್ಟಿ, ಚಂಡಮಾರುತ, ಸಾಂಕ್ರಾಮಿಕರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವು ಕಾರಣಗಳಾಗಿವೆ. ದಿನದಿಂದ

ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ.

ಉಪಸಂಹಾರ :– ಪರಿಸರ ದಿನದಿಂದ ದಿನಕ್ಕೆ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು, ಗಾಳಿ, ಆಹಾರ ಸಿಗದೇ ಹೋಗಬಹುದು. ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.

**2) ಸಂಪರ್ಕ ಮಾಧ್ಯಮಗಳಲ್ಲಿ ದೂರದರ್ಶನದ ಪಾತ್ರ:**

ಪೀಠಿಕೆ :– ಸಂಪರ್ಕ ಮಾಧ್ಯಮಗಳಲ್ಲಿ ಅತೀ ಹೆಚ್ಚು ಬಳಕೆಯಲ್ಲಿರುವ ಮಾಧ್ಯಮ ದೂರದರ್ಶನವಾಗಿದೆ. ಹೆಸರೇ ಹೇಳುವಂತೆ ದೂರದಲ್ಲಿರುವುದನ್ನು ಕುಳಿತಲ್ಲಿಯೇ ದರ್ಶನ ಮಾಡಿಸುವುದು ದೂರದರ್ಶನವಾಗಿದೆ.

ವಿಷಯ ನಿರೂಪಣೆ :– ದೂರದರ್ಶನ ಜನಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಇದು ಮಕ್ಕಳಾದಿಯಾಗಿ ವಯೋವೃದ್ಧರವರೆಗೂ ಎಲರನ್ನು ಆಕರ್ಷಿಸುವ ಮಾಧ್ಯಮವಾಗಿದೆ. ಸಮಾಜದ ನಾನಾ ವೃತ್ತಿಗಳಲ್ಲಿ ತೊಡಗಿರುವ ಎಲ್ಲಾ ಜನರಿಗೂ ಉಪಯುಕ್ತ ಮಾಹಿತಿಯನ್ನು ಒದಗಿಸುವುದರೊಂದಿಗೆ ಮನೋರಂಜನಾ ಮಾಧ್ಯಮವಾಗಿಯೂ ಕಾರ್ಯನಿರ್ವಹಿತ್ತಿದೆ. ಉದಾಹರಣೆಗೆ ರೈತರಿಗೆ ಕೃಷಿ ಮಾಹಿತಿಯನ್ನು, ವರ್ತಕರಿಗೆ ಮಾರುಕಟ್ಟೆಯ ವಿವರವನ್ನು, ಕರಾವಳಿ ತೀರದವರಿಗೆ ಹವಾಮಾನ ಹಾಗೂ ವಾಯುಗುಣದ ಎಚ್ಚರಿಕೆಯನ್ನು ಕುಳಿತಲ್ಲೇ ಏಕಕಾಲಕ್ಕೆ ಎಲ್ಲರಿಗೂ ತಿಳಿಸುತ್ತದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತೆಗಾಗಿ ವಿಜ್ಞಾನ, ಗಣಿತ ವಿಷಯಗಳ ಪಾಠಮಾಲಿಕೆ ಪ್ರಸಾರವಾಗುತ್ತಿವೆ. ಕ್ರೀಡೆ, ಸಂಗೀತ, ವಿಜ್ಞಾನ, ಚಲನಚಿತ್ರ, ವಿವಿಧ ಕ್ಷೇತ್ರಗಳ ಮಾಹಿತಿ ನೀಡುವುದರೊಂದಿಗೆ ಇದೊಂದು ಜ್ಞಾನಾಭಿವೃದ್ಧಿಯನ್ನು ಉಂಟು ಮಾಡುವ ಮಾಧ್ಯಮವಾಗಿದೆ.

ಉಪಸಂಹಾರ:– ಆಧುನಿಕತೆಯಲ್ಲಿ ದೂರದರ್ಶನದ ಪಾತ್ರ ಪ್ರಮುಖವಾದದ್ದು. ವಿದ್ಯಾರ್ಥಿಗಳು ಇದರ ಸಾಧಕ ಭಾದಕಗಳನ್ನು ಅರಿತು ಉಪಯೋಗಿಸಿಕೊಳ್ಳಬೇಕು.

**3) ರಾಷ್ಟ್ರೀಯ ಹಬ್ಬಗಳು**

ಪೀಠಿಕೆ:– ರಾಷ್ಟ್ರೀಯ ಹಬ್ಬಗಳು ಆಯಾ ದೇಶದ ನಾಗರಿಕತೆ, ಸಂಸ್ಕೃತಿ ಹಾಗೂ ಇತಿಹಾಸವನ್ನು ಬಿಂಬಿಸುವ ಪ್ರತೀಕಗಳಾಗಿವೆ. ಎಳೆಯರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ವಿಷಯ ನಿರೂಪಣೆ :– ದೇಶದ ಎಲ್ಲ ಜನರು ತಮ್ಮ ಜಾತಿ, ಧರ್ಮವನ್ನು ಮರೆತು ನಾವೆಲ್ಲರೂ ಒಂದು, ನಾವೂ ಭಾರತೀಯರು ಎಂಬ ಭಾವನೆಯನ್ನು ಹೊಂದಿ ಏಕಕಾಲಕ್ಕೆ ಎಲ್ಲರೂ ಕೂಡಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಭವ್ಯ ಭಾರತದ ಪ್ರಮುಖ ರಾಷ್ಟ್ರೀಯ ಹಬ್ಬಗಳೆಂದರೆ ಸ್ವಾತಂತ್ರ್ಯೋತ್ಸವ ಹಾಗೂ ಗಣರಾಜ್ಯೋತ್ಸವ. ಸ್ವಾತಂತ್ರ್ಯೋತ್ಸವವನ್ನು ಅಗಸ್ಟ 15 ರಂದು ಗಣರಾಜ್ಯೋತ್ಸವವನ್ನು ಜನೇವರಿ 26ರಂದು ಆಚರಿಸುತ್ತೇವೆ. ಭಾರತ ಸ್ವತಂತ್ರ ಹೊಂದಿದ ಇತಿಹಾಸವನ್ನು ಸ್ವಾತಂತ್ರ್ಯೋತ್ಸವ ಬಿಂಬಿಸಿದರೆ, ಗಣರಾಜ್ಯೋತ್ಸವ ದೇಶ ಏಕರೂಪದ ಆಡಳಿತ ಹಾಗೂ ಕಾನೂನು ವ್ಯವಸ್ಥೆಗೆ ಒಳಪಟ್ಟ ಇತಿಹಾಸವನ್ನು ಬಿಂಬಿಸುತ್ತದೆ.

ಉಪಸಂಹಾರ:– ದೇಶದ ಎಲ್ಲ ಜನರು ಶಾಲೆ, ಕಾಲೇಜು, ಕಛೇರಿ, ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿ, ದೇಶಕ್ಕೆ ಗೌರವ ಸೂಚಿಸುವುದು ಹಾಗೂ ಯುವಕರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು ಪ್ರಮುಖ ಪಾತ್ರವಹಿಸುತ್ತವೆ.

**4).ಬಾಲ್ಯವಿವಾಹ – ಒಂದು ಸಾಮಾಜಿಕ ಪಿಡುಗು :**

ಪೀಠಿಕೆ :– ಯಾವುದೇ ಸಮಾಜವು ಸಮೃದ್ಧಿಯಿಂದ ಇರಬೇಕು ಎಂದಾಗ ಅದಕ್ಕೆ ಹಲವಾರು ಅಡೆತಡೆಗಳು ಉಂಟಾಗುತ್ತದೆ. ಹೀಗೆ ಸಮಾಜದ ಸ್ವಾಸ್ತ್ಯವನ್ನು ಹಾಳುಗೆಡುವ ಕೆಲವು ಆಚರಣೆಯನ್ನು ಸಾಮಾಜಿಕ ಪಿಡುಗುಗಳು ಎನ್ನುವರು. ಅವುಗಳಲ್ಲಿ ಬಾಲ್ಯ ವಿವಾಹವೂ ಒಂದು.

ವಿಷಯ ನಿರೂಪಣೆ : ಸಮಾಜವು ಸದೃಢವಾಗಿ, ಸ್ವಾಸ್ತ್ಯದಿಂದ ಇರುವಲ್ಲಿ ಸಾಮಾಜಿಕ ಮೌಲ್ಯಗಳು ಬಹಳ ಮುಖ್ಯ. ಆ ಮೌಲ್ಯಗಳು ಅಪಮೌಲ್ಯವಾದಾಗ ಸಮಾಜದ ಸ್ವಾಸ್ತ್ಯ ಹಾಳಾಗುತ್ತದೆ. ಗಂಡಿಗೆ 21 ವರ್ಷ, ಹೆಣ್ಣಿಗೆ 18 ವರ್ಷತುಂಬದ ಪ್ರಾಪ್ತ ವಯಸ್ಸಿಗೆ ಬರದ ಗಂಡು ಅಥವಾ ಹೆಣ್ಣು ಮಕ್ಕಳನ್ನು ವಿವಾಹ ಮಾಡುವುದರಿಂದ ಅವರು ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಅವರ ಮುಂದಿನ ಪೀಳಿಗೆಯು ಕೂಡ ಅನಾರೋಗ್ಯದಿಂದ ಹುಟ್ಟುತ್ತವೆ. ಅಲ್ಲದೆ ಇವರು ಸ್ವತಂತ್ರವಾಗಿ ಬದುಕು ಸಾಗಿಸಲು ಸಾಧ್ಯವಾಗದೆ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ ಇಡೀ ಜೀವನ ಪರಿತಪಿಸುತ್ತಾರೆ. ಇಂತಹ ದುಷ್ಟ ಪದ್ಧತಿಯು ಒಂದು ಸಾಮಾಜಿಕ ಪಿಡುಗಾಗಿದೆ.

ಉಪಸಂಹಾರ :

ಬಾಲ್ಯವಿವಾಹವು ನಡೆಯದಂತೆ ತಡೆಗಟ್ಟುವ ಮಾರ್ಗದಲ್ಲಿ ಪೋಷಕರು, ಮಕ್ಕಳು, ಸಮಾಜದ ಇತರ ವ್ಯಕ್ತಿಗಳಿಗೆಲ್ಲಾ ಜಾಗೃತಿ ಮೂಡಿಸಿ, ಇಡೀ ಸಮಾಜವನ್ನು ಇಂತಹ ಪಿಡುಗುಗಳಿಂದ ಮುಕ್ತಮಾಡುವುದು ಎಲ್ಲಾ ಪ್ರಜೆಗಳ ಕರ್ತವ್ಯವಾಗಿದೆ.

## ಪತ್ರಲೇಖನ

**ಖಾಸಗಿ ಪತ್ರ / ವೈಯಕ್ತಿಕ ಪತ್ರ**

1)ನಿಮ್ಮನ್ನು ಶ್ರೀರಂಗಪಟ್ಟಣದ ಸರ್ಕಾರಿ ಪ್ರೌಢಶಾಲೆಯ ಕೀರ್ತಿಕುಮಾರ್ ಎಂದು ಭಾವಿಸಿಕೊಂಡು ಹಾಸನದಲ್ಲಿರುವ ನಿಮ್ಮ ತಂದೆಗೆ ಶಾಲಾ ಶುಲ್ಕ ಕಟ್ಟಲು 150/– ರೂಪಾಯಿಗಳನ್ನು ಕೋರಿ ಒಂದು ಪತ್ರ ಬರೆಯಿರಿ.

ಇವರಿಂದ: ದಿನಾಂಕ :05.05.2022

ಕೀರ್ತಿಕುಮಾರ,
ಒಂಬತ್ತನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ಶ್ರೀರಂಗಪಟ್ಟಣ – 571438.

ತೀರ್ಥರೂಪರವರಿಗೆ ನಿಮ್ಮ ಮಗನು ಮಾಡುವ ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ಅಲ್ಲಿ ನಿಮ್ಮ ಮತ್ತು ಅಮ್ಮನ ಆರೋಗ್ಯ ಹೇಗಿದೆ? ಯಾವುದಕ್ಕೂ ಪತ್ರ ಬರೆಯಿರಿ. ಇಲ್ಲಿ ನಾನು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನಿಮ್ಮ ಅಪೇಕ್ಷೆಯಂತೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಲು ಪ್ರಯತ್ನಿಸುತ್ತಿದ್ದೇನೆ. ಪತ್ರದ ಮುಖ್ಯ ವಿಚಾರವೇನೆಂದರೆ, ಜೂನ್ 10 ನೇ ತಾರೀಖಿನ ಒಳಗಾಗಿ ವಾರ್ಷಿಕ ಪರೀಕ್ಷೆಯ ಶುಲ್ಕ 150/– (ನೂರ ಐವತ್ತು ಮಾತ್ರ) ರೂಪಾಯಿಗಳನ್ನು ಕಟ್ಟಬೇಕಾಗಿದೆ. ತಾವು ಆದಷ್ಟು ಬೇಗ ಅಂಚೆ ಮೂಲಕ ಹಣ ಕಳುಹಿಸಿ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಮನೆಯವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸಿ. ಉಳಿದ ವಿಷಯವನ್ನು ಊರಿಗೆ ಬಂದಾಗ ಮಾತನಾಡುತ್ತೇನೆ.

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ ಮಗ
ಕೀರ್ತಿಕುಮಾರ

ಇವರಿಗೆ:
ಶ್ರೀ ಸಿದ್ದಪ್ಪ,
ಮನೆ ಸಂಖ್ಯೆ 54, 1ನೆಯ ಮುಖ್ಯರಸ್ತೆ,
ಕುವೆಂಪುನಗರ, ಹಾಸನ – 573 201

2)ನಿಮ್ಮನ್ನು ಗೌರಿಬಿದನೂರಿನ ವಿನಾಯಕ ಪ್ರೌಢಶಾಲೆಯ ಮಮತ ಕೆ.ಎಲ್. ಎಂದು ಭಾವಸಿಕೊಡು ತುಮಕೂರಿನಲ್ಲಿರುವ ನಿಮ್ಮ ತಂದೆಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಒಂದು ಪತ್ರ ಬರೆಯಿರಿ.

ಇವರಿಂದ, ದಿನಾಂಕ 25–06–2022

ಮಮತ ಕೆ. ಎಲ್.
10 ನೇ ತರಗತಿ, 'ಬಿ' ವಿಭಾಗ,
ವಿನಾಯಕ ಪ್ರೌಢಶಾಲೆ, ಗೌರಿಬಿದನೂರು.

ತೀರ್ಥರೂಪರವರಿಗೆ ನಿಮ್ಮ ಮಗಳು ಮಾಡುವ ನಮಸ್ಕಾರಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ನಿಮ್ಮ ಯೋಗಕ್ಷೇಮದ ವಿಚಾರವಾಗಿ ಪತ್ರವನ್ನು ಬರೆಯಿರಿ.ಇಲ್ಲಿ ನಮ್ಮ ನಿತ್ಯದ ಶಾಲಾ ಚಟುವಟಿಕೆಗಳು ಯಾವ ತೊಂದರೆಯೂ ಇಲ್ಲದಂತೆ ನಡೆಯುತ್ತಿವೆ. ಕಳೆದ ವಾರ ಮಾಸಿಕ ಪರೀಕ್ಷೆಗಳು ನಡೆದಿದ್ದವು. ಆ ಪರೀಕ್ಷೆಯಲ್ಲಿ ನಾನು ತರಗತಿಗೆ ದ್ವಿತೀಯ ಸ್ಥಾನವನ್ನು ಪಡೆದಿದ್ದೇನೆ. ಮಂದಿನ ಪರೀಕ್ಷೆಯಲ್ಲಿ ಇನ್ನು ಸ್ವಲ್ಪ ಪ್ರಯತ್ನ ಮಾಡಿದಲ್ಲಿ ನೀನು ಪ್ರಥಮ ಸ್ಥಾನವನ್ನು ಪಡೆದೇ ಪಡೆಯುತ್ತೀಯ ಎಂದು ನನ್ನ ಗುರುಗಳು ಹೇಳಿದರು. ನಾನು ಅವರ ಮಾರ್ಗದರ್ಶನದಂತೆ ವ್ಯಾಸಂಗವನ್ನು ಮಾಡಿ, ಶಾಲೆಗೆ ಹಾಗೂ ನಿಮಗೆ ಕೀರ್ತಿಯನ್ನು ತರುತ್ತೇನೆ. 10 ನೇ ತರಗತಿಯ ಫಲಿತಾಂಶ ನಮ್ಮ ಮುಂದಿನ ವ್ಯಾಸಂಗಕ್ಕೆ ದಾರಿದೀಪವಾಗುವುದರಿಂದ ಶಾಲಾ ಶಿಕ್ಷಕರು ತುಂಬಾ ಕಾಳಜಿವಹಿಸಿ ಪಾಠಗಳನ್ನು ಮಾಡುತ್ತಿದ್ದಾರೆ. ನಾವೂ ಕೂಡ ಶ್ರದ್ಧೆವಹಿಸಿ ಕಲಿಯುತ್ತಿದ್ದೇವೆ. ಒಳ್ಳೆಯ ಶಾಲೆ ಹಾಗೂ ಗುರುಗಳನ್ನು ಪಡೆದ ನಾವು ನಿಜಕ್ಕೂ ಧನ್ಯರು. ಮನೆಯಲ್ಲಿ ನನ್ನ ಪ್ರೀತಿಯ ಅಮ್ಮ ಮತ್ತು ಅಣ್ಣನಿಗೆ ನನ್ನ ನಮಸ್ಕಾರಗಳನ್ನು ತಿಳಿಸಿರಿ.

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ ಮಗಳು
(ಮಮತ ಕೆ.ಎಲ್.)

ಇವರಿಗೆ,
ಶ್ರೀ ಬಸವರಾಜ ಕೆ. ಎಲ್.
ಮನೆ ನಂ – 1199, ಬನಶಂಕರಿ ನಿಲಯ,
ರಾಜಕುಮಾರ್ ರಸ್ತೆ, ತುಮಕೂರು.

## ವ್ಯವಹಾರಿಕ ಪತ್ರ ಅಥವಾ ಮನವಿ ಪತ್ರ

3) ನಿಮ್ಮನ್ನು ವಿಜಯಪುರದ ಸಂಗಮೇಶ ಎಂದು ಭಾವಿಸಿಕೊಂಡು ನಿಮ್ಮ ಊರಿನ ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸಿಕೊಡುವಂತೆ ಕೋರಿ, ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಒಂದು ಪತ್ರ ಬರೆಯಿರಿ.

ಇವರಿಂದ, ದಿನಾಂಕ : 05.05.2022

ಶ್ರೀ ಸಂಗಮೇಶ,
ಕೋಟೆ ಬೀದಿ,
ಬಿಜಾಪುರ – 586101.

ಇವರಿಗೆ,
ಜಿಲ್ಲಾಧಿಕಾರಿಗಳು,
ವಿಜಯಪುರ – 586101,
ವಿಜಯಪುರ ಜಿಲ್ಲೆ.

ಮಾನ್ಯರೇ,

ವಿಷಯ : ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸುವಂತೆ ಕೋರಿ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಕೋಟೆ ಬೀದಿಯಲ್ಲಿ ಸುಮಾರು 60 ಮನೆಗಳಿದ್ದು ಕೊಳಾಯಿಯ ವ್ಯವಸ್ಥೆ ಇಲ್ಲದೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಜನಪರ ಕಾಳಜಿ ಇರುವ ತಾವು ದಯಮಾಡಿ ಕೋಟೆ ಬೀದಿಗೆ ಬೋರ್‌ವೆಲ್ ಹಾಕಿಸಿ, ನಳದ ಮೂಲಕ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ಸಂಗಮೇಶ)

ಸ್ಥಳ : ಬಿಜಾಪುರ

4) ನಿಮ್ಮನ್ನು ಧಾರವಾಡದ ಜವಾಹರ ನವೋದಯ ಶಾಲೆಯ ಚಿನ್ಮಯ ಜಿ.ಎಂ. ಎಂದು ಭಾವಿಸಿಕೊಂಡು ಎರಡು ದಿನ ರಜೆ ಕೋರಿ ನಿಮ್ಮ ಶಾಲೆಯ ತರಗತಿ ಶಿಕ್ಷಕರಿಗೆ ಒಂದು ರಜಾ ಅರ್ಜಿ ಬರೆಯಿರಿ.

ಇವರಿಂದ, ದಿನಾಂಕ–20–04–2022

ಚಿನ್ಮಯ್ ಜಿ.ಎಂ.
8 ನೇ ತರಗತಿ, 'ಎ' ವಿಭಾಗ,
ಜವಾಹರ ನವೋದಯ ಶಾಲೆ
ಧಾರವಾಡ.

ಇವರಿಗೆ,
ತರಗತಿ ಅಧ್ಯಾಪಕರು
ಜವಾಹರ ನವೋದಯ ಶಾಲೆ
ಧಾರವಾಡ.

ಮಾನ್ಯರೆ,

ವಿಷಯ : ಎರಡು ದಿನ ರಜೆ ನೀಡುವಂತೆ ಕೋರಿ

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನನ್ನ ಅಕ್ಕನ ಮದುವೆಯು ದಿನಾಂಕ 22–04–2022 ಹಾಗೂ 23–04–2022 ರಂದು ಬೆಳಗಾವಿಯಲ್ಲಿ ನೆರವೇರುತ್ತಿದೆ. ಈ ಸಂಭ್ರಮದಲ್ಲಿ ನಾನೂ ಅಗತ್ಯವಾಗಿ ಪಾಲ್ಗೊಳ್ಳಬೇಕಾಗಿದೆ. ಆದುದರಿಂದ ದಯವಿಟ್ಟು ಮೇಲ್ಕಾಣಿಸಿದ ಎರಡು ದಿನಗಳಿಗೆ ರಜೆಯನ್ನು ನೀಡಬೇಕೆಂದು ವಿನಂತಿಸುತ್ತೇನೆ.

ನಮಸ್ಕಾರಗಳೊಂದಿಗೆ, ತಮ್ಮ ವಿಧೇಯ ವಿದ್ಯಾರ್ಥಿ

ಸಹಿ
(ಚಿನ್ಮಯ್ ಜಿ.ಎಂ.)

# ಅಪರಿಚಿತ ಗದ್ಯ

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ.**

1). ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ.ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ. ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ.ಇದಕ್ಕೆ ಪ್ರತಿಯಾಗಿ ಪ್ರಕೃತಿ ನೆರೆಹಾವಳಿ, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ, ಅಕಾಲವೃಷ್ಟಿ, ಚಂಡಮಾರುತ, ಸಾಂಕ್ರಾಮಿಕ ರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವುಗಳು ಕಾರಣಗಳಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ.ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ. ಪರಿಸರ ದಿನದಿಂದ ದಿನಕ್ಕೆ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು, ಗಾಳಿ, ಆಹಾರ ಸಿಗದೇ ಹೋಗಬಹುದು.ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.

**ಪ್ರಶ್ನೆಗಳು:** 1ಅ) ಪರಿಸರ ಸಂರಕ್ಷಣೆ ಇಂದಿನ ಅಗತ್ಯ, ಏಕೆ? ವಿವರಿಸಿ.

1ಆ) ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿರುವುದರಿಂದಾದ ಪರಿಣಾಮವೇನು? ವಿವರಿಸಿ.

2). ನಮಸ್ತೇ ಎನ್ನುತ್ತೇವೆ. ನಮಸ್ಕಾರ ಎನ್ನುತ್ತೇವೆ. ಆ ರೀತಿ ಹೇಳಿದಾಗ ಎರಡು ಅಂಗೈಗಳನ್ನು ಜೋಡಿಸಿ ಮೇಲೆ ಎತ್ತುತ್ತೇವೆ. ಆ ರೀತಿ ಎತ್ತಿದ್ದರ ಜೊತೆಗೆ ತಲೆಯನ್ನು ಬಾಗಿಸುತ್ತೇವೆ. ಈ ರೀತಿ ನಮಸ್ಕಾರ ಮಾಡುವುದರ ಅರ್ಥವಿಶೇಷತೆ ಏನೆಂದರೆ ನಾವೆಲ್ಲಾ ಆತ್ಮಸ್ವರೂಪರು. ಆದ್ದರಿಂದ ನಾವೆಲ್ಲಾ ಅಣ್ಣತಮ್ಮಂದಿರು, ಅಕ್ಕತಂಗಿಯರು. ಆದ ಕಾರಣ ಪರಸ್ಪರವಾಗಿ ಪ್ರೇಮವನ್ನು ಕೊಟ್ಟು ಪಡೆದು ಬದುಕಬೇಕಾಗಿದೆ.ಏಕೆಂದರೆ ನಾವೆಲ್ಲಾ ಪ್ರೇಮಸ್ವರೂಪರು. ಪ್ರೇಮವೇ ಆತ್ಮದ ನಿಜವಾದ ಸ್ವರೂಪವಾಗಿದೆ. ನಾವು ಪಡೆದಿರುವ ಬೇರೆ ಬೇರೆ ದೇಹಗಳು ಆತ್ಮದ ನಿಜವಾದ ಸ್ವರೂಪವನ್ನು ಅರಿಯಲು ಅಡ್ಡಿಯಾಗಿದೆ. ಈ ಅಡ್ಡಿಯನ್ನು ಆಗಿಂದಾಗ್ಗೆ ಪಕ್ಕಕ್ಕೇ ತಳ್ಳುವುದೇ ಈ ನಮಸ್ಕಾರ ವಿಧಿಯ ಉದ್ದೇಶ. ನಾವು ಎರಡು ಕೈ ಜೋಡಿಸಿ ಮಾಡುವ ನಮಸ್ಕಾರದ ಅರ್ಥ ಒಂದು ಕೈ ನಾವು ,ಇನ್ನೊಂದು ಕೈ ನಾವು ಯಾರಿಗೆ ನಮಸ್ಕಾರ ಹೇಳುತ್ತೇವೆಯೋ ಅವರು. ನಮಸ್ಕಾರ ಮಾಡಿದಾಗ ನಮಗೂ ಅವರಿಗೂ ಇದು ನೆನಪಾಗುತ್ತದೆ. ನೆನಪಾಗಬೇಕು. ಎರಡು ಕೈ ಸೇರಿದರೆ ಚಪ್ಪಾಳೆಯಂತೆ. ಆದರೆ ನಮ್ಮ ನಮಸ್ಕಾರ ಚಪ್ಪಾಳೆಯಲ್ಲ. ಜೋಡಿಸಿದ ಕೈಯನ್ನು ಎತ್ತುವುದು 'ಆತ್ಮೋದ್ದಾರ' ಎಂದು ನಾವು ತಿಳಿಯಬೇಕಾಗಿದೆ. ಗುರು ಹಿರಿಯರನ್ನು ಕಂಡಾಗ ಗೌರವದಿಂದ ತಲೆಬಾಗಿ ನಮಸ್ಕರಿಸುವುದು ನಮ್ಮ ಸಂಸ್ಕೃತಿಯ ಪ್ರತೀಕ. ಆತ್ಮೋದ್ದಾರದ ಮಾರ್ಗ. ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ಒಂದು ಮೌಲ್ಯ. ಈ ರೀತಿಯ ಜೀವನವನ್ನು ರೂಢಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ಇನ್ನಷ್ಟು ಸದೃಢವಾಗಿ ರೂಪಿಸಿಕೊಳ್ಳೋಣ. ನಮ್ಮ ಆತ್ಮೋದ್ದಾರ ನಮ್ಮ ಕೈಯಲ್ಲೇ ಇದೆ.

**ಪ್ರಶ್ನೆಗಳು:** 2.ಅ) ಆತ್ಮದ ನಿಜವಾದ ಸ್ವರೂಪವನ್ನು ಹೇಗೆ ವಿವರಿಸಬಹುದು?

2.ಆ) ನಮಸ್ಕಾರದ ಅರ್ಥವಿಶೇಷತೆಯೇನು?

# ಪರಾಮರ್ಶನ ಗ್ರಂಥಗಳು

| ಕ್ರ ಸಂ | ಪುಸ್ತಕದ ಹೆಸರು | ಲೇಖಕರ ಹೆಸರು |
|---|---|---|
| 1 | 10ನೆಯ ತರಗತಿಯ ತಿಳಿ ಕನ್ನಡ ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು |
| 2 | 8 ಮತ್ತು 9ನೆಯ ತರಗತಿಯ ತಿಳಿ ಕನ್ನಡ ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು |
| 3 | ವಿದ್ಯಾರ್ಥಿ ಮಾರ್ಗದರ್ಶಿ | ಕನ್ನಡ ಶಿಕ್ಷಕರ ವೇದಿಕೆ, ಬೆಂಗಳೂರು. |
| 4 | ಕನ್ನಡ ಸಾಹಿತ್ಯ ಸಂಪದ ಪಲ್ಲವ | ಎಂ.ಸಿ.ಸಿ ಪಬ್ಲಿಕೇಷನ್ಸ್, ಬೆಂಗಳೂರು. |
| 5 | ಡೈಮಂಡ್ ತಿಳಿ ಕನ್ನಡ | ಶ್ರೀಲತಾ ಜಿ.ಎನ್. ಎಂ.ಇ.ಎಸ್. ಕಿಶೋರ ಕೇಂದ್ರ ಪ್ರೌಢಶಾಲೆ, ಬೆಂಗಳೂರು |
| 6 | ಕನ್ನಡ ಮಧ್ಯಮ ವ್ಯಾಕರಣ | ತೀ.ನಂ.ಶ್ರೀಕಂಠಯ್ಯ |
| 7 | ಶಬ್ದಮಣಿ ದರ್ಪಣ | ಸಂ. ಡಿ.ಎಲ್. ನರಸಿಂಹಾಚಾರ್ |
| 8 | ಕನ್ನಡ ಛಂದಃಸ್ವರೂಪ | ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ |